# ದಿನಾಂಕ: 09–10–2013 ರಂದು ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಉದ್ಯಾನವನಗಳ ಅಭಿವೃದ್ಧಿ ಮತ್ತು ನಿರ್ವಹಣೆ ಹಾಗೂ ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ ಮತ್ತು ಕೆರೆಗಳ ಅಭಿವೃದ್ಧಿ ಕಾಮಗಾರಿಗೆ ಸಂಬಂಧಪಟ್ಟಂತೆ ನಡೆದ ಸಭೆಯ ನಡವಳಿಗಳು

<table>
<tr><td colspan="3">ಹಾಜರಿದ್ದ ಸದಸ್ಯರು<br>ಶ್ರೀಯುತರಾದ :</td><td colspan="2">ಹಾಜರಿದ್ದ ಅಧಿಕಾರಿಗಳು<br>ಶ್ರೀಯುತರಾದ</td></tr>
<tr><td>1</td><td>ಎಂ.ಮುನಿರಾಜು</td><td>ಅಧ್ಯಕ್ಷರು</td><td>1</td><td>ಅಧಿಕ ಕೌನ್ಸಿಲ್ ಕಾರ್ಯದರ್ಶಿ</td></tr>
<tr><td>2</td><td>ವಿಜಯ ಎಸ್.ಎಸ್.ಪ್ರಸಾದ್</td><td>ಸದಸ್ಯರು</td><td>2</td><td>ಮುಖ್ಯ ಲೆಕ್ಕಾಧಿಕಾರಿ</td></tr>
<tr><td>3</td><td>ಎಂ.ಸಿ.ಶ್ರೀನಿವಾಸ್</td><td>ಸದಸ್ಯರು</td><td>3</td><td rowspan="2">ವಲಯ ಅರಣ್ಯಾಧಿಕಾರಿಗಳು(ಪೂರ್ವ/ಪಶ್ಚಿಮ/ದಕ್ಷಿಣ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ರಾಜರಾಜೇಶ್ವರಿನಗರ)</td></tr>
<tr><td>4</td><td>ಆರ್.ಪಿ.ಶಶಿ</td><td>ಸದಸ್ಯರು</td><td>4</td></tr>
<tr><td>5</td><td>ಪುಟ್ಟಮ್ಮ</td><td>ಸದಸ್ಯರು</td><td rowspan="2">5</td><td rowspan="2">ತೋಟಗಾರಿಕೆ ಅಧೀಕ್ಷಕರು (ಪೂರ್ವ/ಪಶ್ಚಿಮ/ದಕ್ಷಿಣ/ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ರಾಜರಾಜೇಶ್ವರಿನಗರ)</td></tr>
<tr><td>6</td><td>ಎಸ್.ಹೆಚ್.ಪದ್ಮರಾಜ್</td><td>ಸದಸ್ಯರು</td></tr>
<tr><td>7</td><td>ಎಸ್.ಗಂಗಾಧರ್</td><td>ಸದಸ್ಯರು</td><td>6</td><td>ಕಾ.ಪಾ.ಅ.(ಯೋಜನೆ–ಪೂರ್ವ/ಪಶ್ಚಿಮ/ದಕ್ಷಿಣ/ರಾಜರಾಜೇಶ್ವರಿನಗರ)</td></tr>
<tr><td>8</td><td>ಪಳನಿಯಮ್ಮಾಳ್</td><td>ಸದಸ್ಯರು</td><td rowspan="2">7</td><td rowspan="2">ಕಾರ್ಯಪಾಲಕ ಅಭಿಯಂತರರು(ಯೋಜನೆ–ಕೆರೆಗಳು)</td></tr>
<tr><td>9</td><td>ಲಲಿತಾ</td><td>ಸದಸ್ಯರು</td></tr>
</table>

**(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

ಮಾನ್ಯ ಅಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳಿಗೆ ಹೃತ್ಪೂರ್ವಕವಾದ ಸ್ವಾಗತ ಕೋರಿದರು.

ಕಳೆದ ಸಭೆಯಲ್ಲಿ 2013–14ನೇ ಸಾಲಿನ ಆಯವ್ಯಯದಲ್ಲಿ ಉದ್ಯಾನವನಗಳ ನಿರ್ವಹಣೆ, ಮತ್ತು ಕೆರೆಗಳು–ಪರಿಸರ ಕೋಶಕ್ಕೆ ಸಂಬಂಧಪಟ್ಟಂತೆ ಹಾಗೂ ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆಗೆ ಸಂಬಂಧಪಟ್ಟಂತೆ ಸಮಿತಿಗೆ ಕಾಯ್ದಿರಿಸಿರುವ ಅನುದಾನಕ್ಕೆ ಅನುಗುಣವಾಗಿ ಕಾರ್ಯಕ್ರಮ ಪಟ್ಟಿಯನ್ನು ತಯಾರಿಸಿ ಸಮಿತಿಯ ಅನುಮೋದನೆ ಪಡೆಯುವಂತೆ ಮತ್ತು ಅಭಿವೃದ್ಧಿಪಡಿಸಿರುವ ಉದ್ಯಾನವನಗಳು ಹಾಗೂ ಪ್ರಗತಿಯಲ್ಲಿರುವ ಉದ್ಯಾನವನಗಳ ಮಾಹಿತಿಯನ್ನು ಸಮಿತಿಗೆ ಏಳು ದಿನಗಳೊಳಗೆ ನೀಡುವಂತೆ ಸೂಚಿಸಲಾಗಿತ್ತು. ಅದರೂ ಸಹ ನಿಗಧಿತ ಅವಧಿಯಲ್ಲಿ ಮಾಹಿತಿಯನ್ನು ಒದಗಿಸುವಲ್ಲಿ ವಿಳಂಬ ಮಾಡಿರುವುದರ ಬಗ್ಗೆ ಅಸಮಾಧಾನ ವ್ಯಕ್ತಪಡಿಸುತ್ತಾ, ಸಮಿತಿಯು ನಮೂನೆಗಳಲ್ಲಿ ಕೇಳಿರುವ ವಿವರಗಳಿಗೆ ಮಾಹಿತಿಯನ್ನು ಕೂಡಲೇ ಸಮಿತಿಗೆ ಒದಗಿಸಲು ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ಕೆರೆಗಳು ಪರಿಸರ ಕೋಶಕ್ಕೆ ಸಂಬಂಧಪಟ್ಟಂತೆ, ಪಾಲಿಕೆ ವ್ಯಾಪ್ತಿಯಲ್ಲಿ *ಬರುವ ಕೆರೆಗಳಲ್ಲಿ ಈಗಾಗಲೇ ಸಮಗ್ರವಾಗಿ ಅಭಿವೃದ್ಧಿಪಡಿಸುತ್ತಿರುವ ಹಾಗೂ ಪ್ರಗತಿಯಲ್ಲಿರುವ ಕೆರೆಗಳ ಕಾಮಗಾರಿಗಳ ಬಗ್ಗೆ ವಿವರಗಳನ್ನು ಸಮಿತಿಗೆ ಒದಗಿಸುವಂತೆ ಪತ್ರ ಮುಖೇನ ಸೂಚಿಸಲಾಗಿತ್ತು. ಆದರೆ, ಕೆಲವು ಅಧಿಕಾರಿಗಳು ಸೂಕ್ತ ಸಮಯದಲ್ಲಿ ಮಾಹಿತಿಯನ್ನು ಒದಗಿಸುವಲ್ಲಿ ವಿಫಲರಾಗಿರುತ್ತಾರೆ. ಪೂಜ್ಯ ಮಹಾಪೌರರು ನಡೆಸುವ ಸಭೆಗಳಲ್ಲಿ ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟಂತೆ ಕೇಳುವ ಪ್ರಶ್ನೆಗಳಿಗೆ ಮಾಹಿತಿಯನ್ನು ಒದಗಿಸಬೇಕಾಗಿರುವ ಹಿನ್ನೆಲೆಯಲ್ಲಿ, ಅಧಿಕಾರಿಗಳು ನಿಗಧಿತ ಅವಧಿಯಲ್ಲಿ ಮಾಹಿತಿಯನ್ನು ಒದಗಿಸುವಂತೆ ಸೂಚಿಸಿದರು.*

*ಉದ್ಯಾನವನಗಳಲ್ಲಿ ವಿವಿಧ ಜಾತಿಯ ಉಪಯುಕ್ತ ಮರಗಳು ಅಂದರೆ, ಹೊಂಗೆ ಮರ, ನೇರಳೆ ಮರ ಹಾಗೂ ಪಕ್ಷಿಗಳಿಗೆ ಅನುಕೂಲವಾಗುವಂತಹ ಹಣ್ಣಿನ ಮರಗಳನ್ನು ನೆಡಲು ಸೂಚಿಸಿದರು ಹಾಗೂ ತೋಟಗಾರಿಕೆ ಅಧೀಕ್ಷಕರು, ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಮಳೆಗಾಲ ಇರುವ ಹಾಗೆ ಗಿಡಗಳನ್ನು ನೆಡುವ ಕಾರ್ಯಕ್ರಮವನ್ನು ಚುರುಕಾಗಿ ರೂಪಿಸಬೇಕು ಹಾಗೂ ಕೆರೆಗಳ ದಂಡೆಗಳಲ್ಲಿ ಗಿಡಗಳನ್ನು ನೆಡಲು ಕ್ರಮ ತೆಗೆದುಕೊಳ್ಳಲು ಸೂಚಿಸಿದರು.*

ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಅಧ್ಯಕ್ಷರು, ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

**1. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/73/12–13, ದಿನಾಂಕ: 04–03–2013</u>**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 198 ವಾರ್ಡ್‌ಗಳ ವ್ಯಾಪ್ತಿಯಲ್ಲಿ ಇರುವ ಮರಗಳನ್ನು ಗಣತಿ ಮಾಡಿ ಅವುಗಳಿಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ದಾಖಲಿಸಿ ನಕ್ಷೆ ತಯಾರಿಸುವ ಕಾಮಗಾರಿಯನ್ನು 2012–13ನೇ ಸಾಲಿನಲ್ಲಿ ಕೈಗೊಳ್ಳಲು ತಗಲುವ ಒಟ್ಟು ಮೊತ್ತ ರೂ.20.00 ಲಕ್ಷಗಳಿಗೆ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡು ಅರಣ್ಯ ಘಟಕದ ವತಿಯಿಂದ ಸಲ್ಲಿಸಿರುತ್ತಾರೆ. ಸದರಿ ಕಾಮಗಾರಿಯು ವಾರ್ಡ್ ಮಟ್ಟದಲ್ಲಿ ನಿರ್ವಹಿಸಬೇಕಾಗಿರುತ್ತದೆ. ಆದ್ದರಿಂದ, ಅರಣ್ಯ ಘಟಕದ ವ್ಯಾಪ್ತಿಯಲ್ಲಿರುವ 8 ವಲಯಗಳಲ್ಲಿ ಒಂದು ಮರಕ್ಕೆ ರೂ.280/–ರಂತೆ ಅಂದಾಜಿಸಲಾಗಿದ್ದು, ಒಂದು ವಲಯಕ್ಕೆ ಒಟ್ಟು ತಗಲುವ ಅಂದಾಜು ಮೊತ್ತ ರೂ.2.50 ಲಕ್ಷದಂತೆ 8 ವಲಯಗಳಿಗೆ ತಗಲುವ ಒಟ್ಟು ಅಂದಾಜು ವೆಚ್ಚ ರೂ.20.00 ಲಕ್ಷಗಳಾಗಲಿದ್ದು, ಸದರಿ ಕಾಮಗಾರಿಗೆ ಕಾಮಗಾರಿ ಸಂಕೇತವನ್ನು ಪಡೆಯಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ **ದಿನಾಂಕ:26–02–2013 ರ ಟಿಪ್ಪಣಿ.**

**<u>ನಿರ್ಣಯ:</u>– ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:26–02–2013 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

**2. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/77/12–13, ದಿನಾಂಕ: 05–03–2013</u>**

ಸ್ಯಾಂಕಿ ಟ್ಯಾಂಕ್‌ನ ಏರಿಯನ್ನು ಬಲಗೊಳಿಸುವ ಸಲುವಾಗಿ, **Construction of Bund Wall in Sankey Tank in Ward No.35,** ಕಾಮಗಾರಿಗೆ ಮುಖ್ಯ ಅಭಿಯಂತರರು(ಕೆರೆಗಳು) ರವರು ರೂ.180.00 ಲಕ್ಷಗಳ ಅಂದಾಜುಪಟ್ಟಿಗೆ (2012–13ನೇ ಸಾಲಿನ ಲೋಕೋಪಯೋಗಿ ಹಾಗೂ 2010–11ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ಆಧಾರದ ಮೇಲೆ) ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ ಹಾಗೂ ಕಾರ್ಯಪಾಲಕ ಅಭಿಯಂತರರು–2, ಕೆರೆಗಳು ವಿಭಾಗದಿಂದ ಸದರಿ ಕಾಮಗಾರಿಯನ್ನು ಕೈಗೊಳ್ಳಲು ಅಲ್ಪಾವಧಿ ಕರೆಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ: 21–11–2012 ರಂದು ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಸದರಿ ಟೆಂಡರ್‌ನಲ್ಲಿ 02 (ಎರಡು) ಟೆಂಡರ್‌ಗಳು ಸ್ವೀಕೃತವಾಗಿದ್ದು, ಒಬ್ಬರು ಟೆಂಡರ್‌ದಾರರು ತಾಂತ್ರಿಕ ಬಿಡ್‌ನಲ್ಲಿ ಸಿಂಧುವಾಗಿರುತ್ತಾರೆ. ಕಾರ್ಯಪಾಲಕ ಅಭಿಯಂತರರು–2, ಕೆರೆಗಳು ರವರು ತಾಂತ್ರಿಕ ಬಿಡ್‌ನಲ್ಲಿ ಸಿಂಧುತ್ವಗೊಂಡ **ಶ್ರೀ.ಟಿ.ಸುರೇಶ್‌ಕುಮಾರ್ ರೆಡ್ಡಿ,** ಟೆಂಡರ್‌ದಾರರ ಆರ್ಥಿಕ ಬಿಡ್ ಅನ್ನು

ತೆರವುಗೊಳಿಸಿದ್ದು, ಸದರಿ ಟೆಂಡರ್‌ದಾರರು **ರೂ.2,04,48,837.65** ಗಳನ್ನು ನಮೂದಿಸಿದ್ದು, ಇದು ಅನುಮೋದಿತ ಟೆಂಡರ್‌ಗಿಟ್ಟ ಮೊತ್ತ, 2012–13ನೇ ಸಾಲಿನ ಲೋಕೋಪಯೋಗಿ ಹಾಗೂ 2010–11ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಸೂಚಿಯನ್ವಯ ಹೋಲಿಸಿದಾಗ +18.39% ಹೆಚ್ಚು ಇರುತ್ತದೆ. ಆದುದರಿಂದ, ದಿನಾಂಕ:01–01–2013 ರಂದು **ಶ್ರೀ.ಟಿ.ಸುರೇಶ್ ಕುಮಾರ್ ರೆಡ್ಡಿ** ಟೆಂಡರ್‌ದಾರರಿಗೆ ದರ ಸಂಧಾನಕ್ಕೆ ಕೋರಿದ್ದು, ಸದರಿ ಟೆಂಡರ್‌ದಾರರು ದಿನಾಂಕ:11–01–2013 ರಂದು ದರ ಸಂಧಾನಕ್ಕೆ ಸ್ಪಂದಿಸಿದ್ದು, ಶೇಕಡ +18.39% ರಿಂದ +13.26% ಗಳಿಗೆ ಕಾಮಗಾರಿ ಮಾಡಲು ಒಪ್ಪಿದ ಮೇರೆಗೆ ಟೆಂಡರ್ ಅನುಮೋದನೆಗಾಗಿ ಮಂಡಿಸಲಾಗಿತ್ತು.

ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾನ್ಯ ಆಯುಕ್ತರು, ಸದರಿ ಟೆಂಡರ್‌ದಾರರ ನಮೂದಿತ ಮೊತ್ತವು ಹೆಚ್ಚಾಗಿದ್ದು, ಟೆಂಡರ್‌ದಾರರೊಂದಿಗೆ ಮತ್ತೊಮ್ಮೆ ದರ ಸಂಧಾನ ಮಾಡಲು ಆದೇಶಿಸಿದ ಮೇರೆಗೆ ದಿನಾಂಕ:23–01–2013 ರಂದು ಮತ್ತೊಮ್ಮೆ ದರ ಸಂಧಾನಕ್ಕಾಗಿ ಟೆಂಡರ್‌ದಾರರನ್ನು ಆಹ್ವಾನಿಸಿದ್ದು, ಇದಕ್ಕೆ ಪ್ರತಿಕ್ರಿಯಿಸಿದ ಟೆಂಡರ್‌ದಾರರು **ಶೇಕಡ +13.26% ರಿಂದ +11.93% ಗಳಿ**ಗೆ ಕಾಮಗಾರಿಯನ್ನು ಕೈಗೊಳ್ಳಲು ಒಪ್ಪಿರುತ್ತಾರೆ.

ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊಬಲಗು **ರೂ.1,72,71,833–26** ಗಳಾಗಿದ್ದು, ಈ ಕಾಮಗಾರಿಗೆ ಮಂಜೂರಾದ ದರಗಳಿಗೆ ಟೆಂಡರ್‌ದಾರರಾದ **ಶ್ರೀ.ಟಿ.ಸುರೇಶ್‌ಕುಮಾರ್ ರೆಡ್ಡಿರವರು,** ಕನಿಷ್ಟ ದರಗಳನ್ನು ನಮೂದಿಸಿದ್ದು, ಇದರ ಮೊತ್ತ **ರೂ.1,93,31,943.00** ಗಳಾಗಿದ್ದು, ಇದು ಟೆಂಡರ್‌ಗಿಟ್ಟ ಮೊತ್ತ 2012–13ನೇ ಸಾಲಿನ ಲೋಕೋಪಯೋಗಿ ಹಾಗೂ 2010–11ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಸೂಚಿಯನ್ವಯ ಹೋಲಿಸಿದಾಗ **ಶೇಕಡ +11.93% ರಷ್ಟು ಹೆಚ್ಚು** ನಮೂದಿಸಿದ್ದು, ಸದರಿ ಟೆಂಡರ್‌ನಲ್ಲಿ ನಮೂದಿಸಿದ ಟೆಂಡರ್ ದರವನ್ನು ಮಾನ್ಯ ಆಯುಕ್ತರು ಅನುಮೋದಿಸಿರುತ್ತಾರೆ. (ಕಂಡಿಕೆ(118), ಪುಟ ಸಂಖ್ಯೆ.32, ಆಯುಕ್ತರ ಆಪ್ತ ಕಾರ್ಯಾಲಯ ಸಂಖ್ಯೆ.ಪಿಎಸ್‌ಆರ್(ಜಿ)9301/12–13, ದಿನಾಂಕ:06–02–2013)

ಮೇಲ್ಕಂಡ ಅಂಶಗಳನ್ನು ಗಮನಿಸಲಾಗಿ, ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) **ರೂ.1,93,31,943.00**ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ/335/ಎಮ್‌ಎನ್‌ವೈ/2007(ಭಾ), ದಿನಾಂಕ:11–05–2009 ರ ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977, ನಿಯಮ 6 ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯ ಬಾಕಿ ಇಟ್ಟು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೆಚ್ಚಿನ ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆಯ ಶಿಫಾರಸ್ಸನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ/636/ಎಂಎನ್‌ವೈ/2010, ಬೆಂಗಳೂರು, ದಿನಾಂಕ: 02–04–2011ರ ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6 ಕ್ಕೆ ನೀಡಲಾದ ತಿದ್ದುಪಡಿಯನ್ನು ಸರ್ಕಾರವು ಅಂಗೀಕರಿಸಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೋಟಗಾರಿಕೆ ಸ್ಥಾಯಿ ಸಮಿತಿಯ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಯ ಟೆಂಡರ್‌ದಾರರಾದ **ಶ್ರೀ.ಟಿ.ಸುರೇಶ್‌ಕುಮಾರ್‌ರೆಡ್ಡಿರವರು** 2012–13ನೇ ಸಾಲಿನ ಲೋಕೋಪಯೋಗಿ ಹಾಗೂ 2010–11ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಸೂಚಿ ಮೇಲೆ ನಮೂದಿಸಿರುವ ದರಗಳಾದ ಶೇಕಡ **+11.93%** ರಷ್ಟು **ಹೆಚ್ಚು** ಹಾಗೂ ನಮೂದಿತ ಮೊತ್ತವಾದ **ರೂ.1,93,31,943.00 (ರೂಪಾಯಿ ಒಂದು ಕೋಟಿ ತೊಂಭತ್ತುಮೂರು ಲಕ್ಷದ ಮೂವ್ವತ್ತೊಂದು**

**ಸಾವಿರದ ಒಂಭೈನೂರ ನಲವತ್ತು ಮೂರು ಮಾತ್ರ**)ಗಳ ಟೆಂಡರ್‌ಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ **ದಿನಾಂಕ: 03–03–2013 ರ ಟಿಪ್ಪಣಿ.**

**ನಿರ್ಣಯ:–** **ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:03–03–2013 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

### 3. ವಿಷಯ ಸಂಖ್ಯೆ:ತೋ/ಸ್ಥಾ/ಸ/ 79/12–13, ದಿನಾಂಕ: 14–03–2013

ವಾರ್ಡ್ ಸಂಖ್ಯೆ.174 ರ, ಬೊಮ್ಮನಹಳ್ಳಿ ವಲಯದ ವ್ಯಾಪ್ತಿಗೆ ಒಳಪಡುವ 14ನೇ ಮುಖ್ಯರಸ್ತೆ, 14ನೇ ಅಡ್ಡ ರಸ್ತೆ, ಹೆಚ್.ಎಸ್.ಆರ್ 4ನೇ ಸೆಕ್ಟರ್‌ನಲ್ಲಿ Providing pathway and other Development Works to Park ಕಾಮಗಾರಿಗೆ ಸಂಬಂಧಿಸಿದಂತೆ, ಜಾಬ್ ಕೋಡ್ ನೀಡಲು ಮಾನ್ಯ ಆಯುಕ್ತರು ದಿನಾಂಕ:03–03–2013 ರಂದು ಅನುಮೋದನೆ ನೀಡಿರುತ್ತಾರೆ. ಸದರಿ ಕಾಮಗಾರಿಯನ್ನು ಜರೂರಾಗಿ ನಿರ್ವಹಿಸಲು ಸಾರ್ವಜನಿಕರು ಸಂಬಂಧಪಟ್ಟ ಶಾಸಕರು ಹಾಗೂ ಪಾಲಿಕೆ ಸದಸ್ಯರು ಕೋರಿರುತ್ತಾರೆ. ಸದರಿ ಕಾಮಗಾರಿಯನ್ನು 2012–13ನೇ ಸಾಲಿನ ಎಸ್.ಆರ್. ಲೋಕೋಪಯೋಗಿ, ಬಂದರು ಮತ್ತು ಒಳನಡು ಜಲ ಸಾರಿಗೆ ಇಲಾಖೆ, ಬೆಂಗಳೂರು ವೃತ್ತ, ಬೆಂಗಳೂರು, ಈ ದರಗಳನ್ನು ಆಧರಿಸಿ ರೂ.38.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ.

| **ಕ್ರ. ಸಂ.** | **ವಾರ್ಡ್ ಸಂಖ್ಯೆ** | **ಕಾಮಗಾರಿ ಹೆಸರು** | **ಮೊತ್ತ (ರೂ.ಲಕ್ಷಗಳಲ್ಲಿ)** |
|---|---|---|---|
| **01** | **174–ಬೊಮ್ಮನಹಳ್ಳಿ** | Providing pathway and other Development Works to Park at HSR 4th Sector, 14th Main, 14th cross, Bommanahalli Zone. | **38.00** |

ಈ ಕಾಮಗಾರಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ನೀಡುವ ಸಲುವಾಗಿ ಅನುಮೋದನೆಯನ್ನು ನೀಡಲು ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರವರ ದಿನಾಂಕ13–03–2013 ರ ಟಿಪ್ಪಣಿ.

**ನಿರ್ಣಯ:–** **ಈ ಪ್ರಸ್ತಾವನೆಯನ್ನು ಕೈಬಿಡಲಾಗಿದೆ.**

### 4.ವಿಷಯದ ಸಂಖ್ಯೆ:ತೋ/ಸ್ಥಾ/ಸ/80/12–13, ದಿನಾಂಕ: 14–03–2013

ಪಶ್ಚಿಮ ವಲಯ ವ್ಯಾಪ್ತಿಗೆ ಬರುವ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು ತೋಟಗಾರಿಕೆ ಸ್ಥಾಯಿ ಸಮಿತಿ ಕಂಡಿಕೆ 4 ರಿಂದ 7 ರವರೆಗೆ ಇರುವಂತೆ 2012–13ನೇ ಸಾಲಿನ ಆಯವ್ಯಯದಲ್ಲಿ ಇರುವ ಅನುದಾನಕ್ಕನುಗುಣವಾಗಿ ಪಶ್ಚಿಮ ವಲಯಕ್ಕೆ ಹಂಚಿಕೆಯಾಗಿರುವ ರೂ.250.00 ಲಕ್ಷಗಳಿಗೆ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು ಅನುದಾನ ಕಾಯ್ದಿರಿಸಿ ಕಾಮಗಾರಿ ಕೈಗೊಳ್ಳುವಂತೆ ಸಮಿತಿಯು ನಿರ್ಣಯ ಕೈಗೊಂಡಿರುತ್ತದೆ. ಅದರಂತೆ, ಪಶ್ಚಿಮ ವಲಯ ವ್ಯಾಪ್ತಿಯಲ್ಲಿ ಬರುವ

ಉದ್ಯಾನವನಗಳಿಗೆ ತಂತಿಬೇಲಿ, ನಡುದಾರಿ ನಿರ್ಮಾಣ, ದುರಸ್ಥಿಯಲ್ಲಿರುವ ಸ್ಥಳಗಳಲ್ಲಿ ಗ್ರಿಲ್ ಫೆನ್ಸಿಂಗ್ ಅಳವಡಿಸುವುದು, ನಿರ್ಮಾಣದ ಕಾಮಗಾರಿಗಳಿಗೆ 2012–13ನೇ ಸಾಲಿನ ಆಯವ್ಯಯದ ತೋಟಗಾರಿಕೆ ಲೆಕ್ಕಶೀರ್ಷಿಕೆ ಸಂಖ್ಯೆ. ಪಿ.ಓ.0311, 088 ಅಡಿಯಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ರೂ.250.00 ಲಕ್ಷಗಳ ಮೊತ್ತದಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರವರ ದಿನಾಂಕ13–03–2013 ರ ಟಿಪ್ಪಣಿ.

**<u>ನಿರ್ಣಯ:–</u> ಈ ಪ್ರಸ್ತಾವನೆಯನ್ನು ಕೈಬಿಡಲಾಗಿದೆ.**

**5. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/85/12–13, ದಿನಾಂಕ: 18–03–2013</u>**

ಕಾರ್ಯಪಾಲಕ ಅಭಿಯಂತರರು–3, ಕೆರೆಗಳು ರವರು ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02 (ಎರಡು) ಟೆಂಡರ್‌ಗಳು ಸ್ವೀಕೃತವಾಗಿದ್ದು, 02 ಟೆಂಡರ್‌ಗಳು ಸಿಂಧುವಾಗಿರುತ್ತಾರೆ. ಕಾರ್ಯಪಾಲಕ ಅಭಿಯಂತರರು–3, (ಕೆರೆಗಳು)ರವರು ಕನಿಷ್ಠ ಟೆಂಡರ್‌ದಾರರಾದ ಶ್ರೀ.ಎನ್.ಎಂ.ಕೃಷ್ಣಮೂರ್ತಿ, ಗುತ್ತಿಗೆದಾರರ ಟೆಂಡರ್‌ನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ಲೋಕೋಪಯೋಗಿ ಇಲಾಖೆಯ 2012–13ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ತಯಾರಿಸಲಾಗಿರುವ ರೂ.100.00ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ ಮುಖ್ಯ ಅಭಿಯಂತರರು (ಕೆರೆಗಳು) ರವರು ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊಬಲಗು ರೂ.96.14 ಲಕ್ಷಗಳಾಗಿದ್ದು, ಗುತ್ತಿಗೆದಾರರಾದ ಶ್ರೀ.ಎನ್.ಎಂ.ಕೃಷ್ಣಮೂರ್ತಿ ರವರು ರೂ.1,13,64,860.96/–ಗಳ ದರಗಳನ್ನು ನಮೂದಿಸಿ ಕನಿಷ್ಠ ಟೆಂಡರ್‌ದಾರರಾಗಿರುತ್ತಾರೆ. ಈ ಮೊತ್ತವು ಟೆಂಡರ್‌ಗಿಟ್ಟ ಮೊತ್ತಕ್ಕಿಂತ ಶೇ.18.21% ರಷ್ಟು ಹೆಚ್ಚು ದರವಾಗಿರುತ್ತದೆ. ನಂತರ ಗುತ್ತಿಗೆದಾರರೊಂದಿಗೆ ದರ ಸಂಧಾನ ಮಾಡಿ ಟೆಂಡರ್‌ಗಿಟ್ಟ ಮೊತ್ತಕ್ಕಿಂತ ಶೇ.11.95% ರಷ್ಟು ಹೆಚ್ಚು ಅಂದರೆ ರೂ.1,07,62,686.00 ಗಳ ಟೆಂಡರ್ ಮೊತ್ತದ ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಲಾಗಿ, ಗುತ್ತಿಗೆದಾರರಾದ ಶ್ರೀ.ಎನ್.ಎಂ.ಕೃಷ್ಣಮೂರ್ತಿ ರವರೊಂದಿಗೆ ದರ ಸಂಧಾನ ನಂತರ ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) ರೂ.1,07,62,686.00 (ಒಂದು ಕೋಟಿ ಏಳು ಲಕ್ಷದ ಅರವತ್ತೆರೆಡು ಸಾವಿರದ ಆರು ನೂರ ಎಂಭತ್ತಾರು ರೂಪಾಯಿಗಳು ಮಾತ್ರ) ಅಂದರೆ ಟೆಂಡರ್‌ಗಿಟ್ಟ ಮೊತ್ತಕ್ಕಿಂತ ಶೇ.11.95% ರಷ್ಟು ಹೆಚ್ಚಾಗಿದ್ದು, ಸದರಿ ಕಾಮಗಾರಿಯ ಟೆಂಡರ್‌ನ್ನು ಅನುಮೋದಿಸಲು ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ15–03–2013 ರ ಟಿಪ್ಪಣಿ.

**<u>ನಿರ್ಣಯ:–</u> ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ15–03–2013 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

## 6. ವಿಷಯದ ಸಂಖ್ಯೆ:ತೋ/ಸ್ಥಾ/ಸ/01/13-14, ದಿನಾಂಕ: 20-09-2013

**ಕೆರೆಗಳ ವಿಭಾಗ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಶದಲ್ಲಿರುವ 55 ಕೆರೆಗಳಲ್ಲಿ ಈಗಾಗಲೇ 21 ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ಪ್ರಸ್ತುತ 24 ಕೆರೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದ್ದು, ಈ ಎಲ್ಲಾ ಕೆರೆಗಳಲ್ಲಿ ಅಭಿವೃದ್ಧಿ ಕೆಲಸಗಳು ಬಹುತೇಕ ಪೂರ್ಣಗೊಂಡಿದ್ದು, ಅರಣ್ಯೀಕರಣ ಕೆಲಸಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಪ್ರಸಕ್ತ ಮಳೆಗಾಲದ ಒಳಗಾಗಿ ಅಭಿವೃದ್ಧಿಪಡಿಸಿರುವ ಕೆರೆಗಳಲ್ಲಿ ವಿವಿಧ ಜಾತಿಯ ಸಸಿಗಳನ್ನು ಮತ್ತು ಕೆರೆಯ ಅಂಚಿನಲ್ಲಿ ಜೈವಿಕ ಬೇಲಿ ರೂಪದ ಸಸಿಗಳನ್ನು ನೆಟ್ಟು ಪೋಷಿಸಬೇಕಾಗಿರುತ್ತದೆ. ಹೀಗೆ ನೆಟ್ಟ ಸಸಿಗಳಿಂದ ಕೆರೆಯ ಹಸರೀಕರಣವಾಗುವುದಲ್ಲದೆ ವಿವಿಧ ಜಾತಿಯ ಪಕ್ಷಿ ಸಮೂಹವನ್ನು ಅಕರ್ಷಿಸಿ ಕೆರೆಗಳಲ್ಲಿ ಜೀವ ವೈವಿಧ್ಯತೆ ಕಾಪಾಡಲು ನೆರವಾಗುತ್ತದೆ. ಅಲ್ಲದೇ ಸಾರ್ವಜನಿಕರು ಮತ್ತು ಸ್ಥಳೀಕರು ಕೆರೆಯನ್ನು ವಾಯುವಿಹಾರಕ್ಕೆ ಉಪಯೋಗಿಸುವುದರಿಂದ ಸ್ವಚ್ಛ ಗಾಳಿ ಮತ್ತು ನೆರಳು ಕಲ್ಪಿಸಿದಂತಾಗುತ್ತದೆ. ಆದುದರಿಂದ, ಕೆರೆಗಳಲ್ಲಿ ಜೀವ ವೈವಿಧ್ಯತೆ ಮತ್ತು ಪರಿಸರ ಸಮತೋಲನವನ್ನು ಕಾಪಾಡುವ ನಿಟ್ಟಿನಲ್ಲಿ 01 ಲಕ್ಷ ಸಂಖ್ಯೆ ಸಸಿಗಳನ್ನು 2013-14ನೇ ಸಾಲಿನಲ್ಲಿ ನೆಟ್ಟು ಪೋಷಿಸಲು ಯೋಜಿಸಲಾಗಿದ್ದು, ಈ ಕಾಮಗಾರಿಗಳಿಗೆ ರೂ.350.00 ಲಕ್ಷಗಳ ಅನುದಾನದ ಅವಶ್ಯಕತೆಯಿರುತ್ತದೆ.

**ಅರಣ್ಯ ಘಟಕ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅರಣ್ಯ ಘಟಕದ ವ್ಯಾಪ್ತಿಯಲ್ಲಿ ಬರುವ ಎಂಟು ವಲಯಗಳಾದ ಪೂರ್ವ, ಯಲಹಂಕ, ದಾಸರಹಳ್ಳಿ, ಮಹದೇವಪುರ, ಪಶ್ಚಿಮ, ದಕ್ಷಿಣ, ರಾಜರಾಜೇಶ್ವರಿನಗರ ಮತ್ತು ಬೊಮ್ಮನಹಳ್ಳಿ ವಲಯಗಳಲ್ಲಿ 2013-14ನೇ ಸಾಲಿನಲ್ಲಿ ಅರಣ್ಯೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಸಾರ್ವಜನಿಕರು, ಪಾಲಿಕೆ ಸದಸ್ಯರು ಹಾಗೂ ಮಾನ್ಯ ವಿಧಾನಸಭಾ ಸದಸ್ಯರುಗಳಿಂದ ಸಸಿಗಳನ್ನು ನೆಡುವಂತೆ ಒತ್ತಡ ಮಾಡುತ್ತಿರುತ್ತಾರೆ.

ಈಗಾಗಲೇ ಮುಂಗಾರು ಪ್ರಾರಂಭವಾಗಿದ್ದು, ಸಸಿಗಳನ್ನು ನೆಡಲು ಸೂಕ್ತ ಸಮಯವಾಗಿದೆ. ಈಗಾಗಲೇ ನೆಟ್ಟಿರುವ ಸಸಿಗಳನ್ನು ಪೋಷಣೆ ಮಾಡಲು ಸಕಾಲವಾಗಿರುತ್ತದೆ. ಸಸ್ಯಕ್ಷೇತ್ರಗಳಲ್ಲಿ ಈಗಾಗಲೇ ಬೆಳೆಸಿರುವ ಸಸಿಗಳನ್ನು ದಿನನಿತ್ಯ ನಿರ್ವಹಣೆ ಮಾಡಬೇಕಾಗಿರುತ್ತದೆ. ಮಳೆಗಾಳಿಗೆ ಮರಗಳು / ರೆಂಬೆಗಳು ಧರೆಗುರುಳಿ ಸಾರ್ವಜನಿಕರ ಆಸ್ತಿ-ಪಾಸ್ತಿ, ಪ್ರಾಣಕ್ಕೆ ಹಾನಿಯುಂಟು ಮಾಡುವುದನ್ನು ತಡೆಯಲು ಮರಗಳ ವ್ಯವಸ್ಥಿತ ನಿರ್ವಹಣೆ ಮಾಡಬೇಕಾಗಿದೆ. ಬೆಂಗಳೂರಿನಾದ್ಯಂತ ಅಲ್ಲಲ್ಲಿ ವನ್ಯಜೀವಿಗಳ ಉಪಟಳಗಳಿಂದ ಸಾರ್ವಜನಿಕರಿಗೆ ಆಗುವ ತೊಂದರೆಯನ್ನು ತಪ್ಪಿಸುವುದು ಸಹ ದಿನನಿತ್ಯದ ಕಾರ್ಯಕ್ರಮವಾಗಿರುತ್ತದೆ. ಆದುದರಿಂದ, ಈ ಎಲ್ಲಾ ಕಾಮಗಾರಿಗಳು ತುರ್ತಾದ ಕಾಮಗಾರಿಗಳಾಗಿದ್ದು, ಇವುಗಳನ್ನು ಋತುಮಾನಕ್ಕನುಗುಣವಾಗಿ ಸಕಾಲದಲ್ಲಿ ನಿರ್ವಹಿಸುವುದು ಅತೀ ಅವಶ್ಯಕವಾದುದರಿಂದ, ಈ ಕೆಳಗಿನ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಕೈಗೊಳ್ಳಬೇಕಾಗಿದೆ. ಕೆಲಸಗಳ ವಿವರಗಳು ಈ ಕೆಳಗಿನಂತಿರುತ್ತದೆ.

| ಕ್ರ. ಸಂ. | ಕೆರೆಗಳು / ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1. | ಅಂಬಲೀಪುರ ಮೇಲಿನ ಕೆರೆಯಲ್ಲಿ ಅರಣ್ಯೀಕರಣ | 12.00 |
| 2. | ವಿಜಿನಾಪುರ ಕೆರೆಯಲ್ಲಿ ಅರಣ್ಯೀಕರಣ | 8.00 |

| | | |
|---|---|---|
| 3. | ಕೊಡಿಗೆಹಳ್ಳಿ ಕೆರೆಯಲ್ಲಿ ಅರಣ್ಯೀಕರಣ | 7.00 |
| 4. | ದೇವಸಂದ್ರ ಕೆರೆಯಲ್ಲಿ ಅರಣ್ಯೀಕರಣ | 10.00 |
| 5. | ಕೊಡ್ಲು ಚಿಕ್ಕಕೆರೆ ಕೆರೆಯಲ್ಲಿ ಅರಣ್ಯೀಕರಣ | 10.00 |
| 6. | ದೊಡ್ಡಕನ್ನೇಲಿ ಕೆರೆಯಲ್ಲಿ ಅರಣ್ಯೀಕರಣ | 12.00 |
| 7. | ಕೊಡ್ಲು ದೊಡ್ಡ ಕೆರೆಯಲ್ಲಿ ಅರಣ್ಯೀಕರಣ | 15.00 |
| 8. | ಸೌಳ್ ಕೆರೆಯಲ್ಲಿ ಅರಣ್ಯೀಕರಣ | 20.00 |
| 9. | ಪರಪ್ಪನ ಅಗ್ರಹಾರ ಕೆರೆಯಲ್ಲಿ ಅರಣ್ಯೀಕರಣ | 10.00 |
| 10. | ಕಸವನಹಳ್ಳಿ ಕೆರೆಯಲ್ಲಿ ಅರಣ್ಯೀಕರಣ | 20.00 |
| 11. | ಸೀಗೇಹಳ್ಳಿ ಕೆರೆಯಲ್ಲಿ ಅರಣ್ಯೀಕರಣ | 15.00 |
| 12. | ಮನ್ನೇಕೊಳಲು ಕೆರೆಯಲ್ಲಿ ಅರಣ್ಯೀಕರಣ | 12.00 |
| 13. | ಶೀಲವಂತನ ಕೆರೆಯಲ್ಲಿ ಅರಣ್ಯೀಕರಣ | 12.00 |
| 14. | ಸಿಂಗಸಂದ್ರ ಕೆರೆಯಲ್ಲಿ ಅರಣ್ಯೀಕರಣ | 8.00 |
| 15. | ಹರಳೂರು ಕೆರೆಯಲ್ಲಿ ಅರಣ್ಯೀಕರಣ | 9.00 |
| 16. | ದೊರೆಕೆರೆಯಲ್ಲಿ ಅರಣ್ಯೀಕರಣ | 5.00 |
| 17. | ಸರಸೀಪುರ ಕೆರೆ –1 (ಸ.ನಂ.26)ಯಲ್ಲಿ ಅರಣ್ಯೀಕರಣ | 4.00 |
| 18. | ಸರಸೀಪುರ ಕೆರೆ –1 (ಸ.ನಂ.20)ಯಲ್ಲಿ ಅರಣ್ಯೀಕರಣ | 5.00 |
| 19. | ದಾಸರಹಳ್ಳಿ ಕೆರೆಯಲ್ಲಿ ಅರಣ್ಯೀಕರಣ | 10.00 |
| 20. | ಹೇರೋಹಳ್ಳಿ ಕೆರೆಯಲ್ಲಿ ಅರಣ್ಯೀಕರಣ | 10.00 |
| 21. | ಹಂದ್ರಳ್ಳಿ ಕೆರೆಯಲ್ಲಿ ಅರಣ್ಯೀಕರಣ | 8.00 |
| 22. | ಲಿಂಗಧೀರನಹಳ್ಳಿ ಕೆರೆಯಲ್ಲಿ ಅರಣ್ಯೀಕರಣ | 6.00 |
| 23. | ದೀಪಾಂಜಲಿ ಕೆರೆಯಲ್ಲಿ ಅರಣ್ಯೀಕರಣ | 2.00 |
| 24. | ದೊಡ್ಡಬೊಮ್ಮಸಂದ್ರ ಕೆರೆಯಲ್ಲಿ ಅರಣ್ಯೀಕರಣ | 20.00 |
| 25. | ಹಲಗೇವಡೇರಹಳ್ಳಿ ಕೆರೆಯಲ್ಲಿ ಅರಣ್ಯೀಕರಣ | 10.00 |
| 26. | ಕೋಗಿಲು ಕೆರೆಯಲ್ಲಿ ಅರಣ್ಯೀಕರಣ | 10.00 |
| 27. | ಕಟ್ಟಿಗೇನಹಳ್ಳಿ ಕೆರೆಯಲ್ಲಿ ಅರಣ್ಯೀಕರಣ | 10.00 |
| 28. | ಜೋಗಿ ಕೆರೆಯಲ್ಲಿ ಅರಣ್ಯೀಕರಣ | 2.00 |
| 29. | ಅಗ್ರಹಾರ ಕೆರೆಯಲ್ಲಿ ಅರಣ್ಯೀಕರಣ | 5.00 |
| 30. | ಚೊಕ್ಕನಹಳ್ಳಿ ಕೆರೆಯಲ್ಲಿ ಅರಣ್ಯೀಕರಣ | 4.00 |
| 31. | ಕೌದೇನಹಳ್ಳಿ ಕೆರೆಯಲ್ಲಿ ಅರಣ್ಯೀಕರಣ | 10.00 |
| 32. | ವೀರಸಾಗರ ಕೆರೆಯಲ್ಲಿ ಅರಣ್ಯೀಕರಣ | 5.00 |
| 33. | ರಾಮಗೊಂಡನಹಳ್ಳಿ ಕೆರೆಯಲ್ಲಿ ಅರಣ್ಯೀಕರಣ | 15.00 |
| 34. | ಪಾಲನಹಳ್ಳಿ ಕೆರೆಯಲ್ಲಿ ಅರಣ್ಯೀಕರಣ | 7.00 |
| 35. | ಯಲಹಂಕ ಕೆರೆಯಲ್ಲಿ ಅರಣ್ಯೀಕರಣ | 20.00 |
| 36. | ತಿರುಮೇನಹಳ್ಳಿ ಕೆರೆಯಲ್ಲಿ ಅರಣ್ಯೀಕರಣ | 7.00 |
| 37. | ಅವಲಹಳ್ಳಿ ಕೆರೆಯಲ್ಲಿ ಅರಣ್ಯೀಕರಣ | 5.00 |
| | ಒಟ್ಟು ಮೊತ್ತ ರೂ. | **350.00** |

# ಪಟ್ಟಿ –2

| ಕ್ರ. ಸಂ. | ಕಾಮಗಾರಿಗಳ ವಿವರ | ವಲಯ | ಸಸಿಗಳ ಸಂಖ್ಯೆ/ ತಂಡ | ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|---|
| 1. | 2011–12 ಮತ್ತು 2012–13ನೇ ಸಾಲಿನಲ್ಲಿ ಬೆಳೆಸಿದ ನೆಡುತೋಪು ನಿರ್ವಹಣೆ ಕಾಮಗಾರಿ (ಪಿ–1855) | ಪೂರ್ವ | 17000 | 328.08 |
| | | ಯಲಹಂಕ | 45500 | |
| | | ಮಹದೇವಪುರ | 38500 | |
| | | ದಾಸರಹಳ್ಳಿ | 24000 | |
| | | ಪಶ್ಚಿಮ | 14000 | |
| | | ದಕ್ಷಿಣ | 31000 | |
| | | ಬೊಮ್ಮನಹಳ್ಳಿ | 30325 | |
| | | ರಾಜರಾಜೇಶ್ವರಿನಗರ | 35000 | |
| | | **ಒಟ್ಟು ಸಸಿಗಳು** | **230325** | |
| 2. | ಸಸ್ಯಕ್ಷೇತ್ರಗಳಲ್ಲಿ ಸಸಿಗಳ ನಿರ್ವಹಣೆ (ಪಿ–1856) | ಪೂರ್ವ | 170000 | **32.14** |
| | | ಯಲಹಂಕ | 195000 | |
| | | ಮಹದೇವಪುರ | 56000 | |
| | | ದಾಸರಹಳ್ಳಿ | 41000 | |
| | | ಪಶ್ಚಿಮ | 70000 | |
| | | ದಕ್ಷಿಣ | 70000 | |
| | | ಬೊಮ್ಮನಹಳ್ಳಿ | 90000 | |
| | | ರಾಜರಾಜೇಶ್ವರಿನಗರ | 70000 | |
| | | **ಒಟ್ಟು ಸಸಿಗಳು** | **762000** | |
| 3. | ಮರಗಳ ವ್ಯವಸ್ಥಿತ ನಿರ್ವಹಣೆ (ಪಿ–1701) | ಪೂರ್ವ | 6 ತಂಡಗಳು | **474.42** |
| | | ಯಲಹಂಕ | 1 ತಂಡ | |
| | | ಮಹದೇವಪುರ | 1 ತಂಡ | |
| | | ದಾಸರಹಳ್ಳಿ | 1 ತಂಡ | |
| | | ಪಶ್ಚಿಮ | 4 ತಂಡ | |
| | | ದಕ್ಷಿಣ | 5 ತಂಡ | |
| | | ಬೊಮ್ಮನಹಳ್ಳಿ | 1 ತಂಡ | |
| | | ರಾಜರಾಜೇಶ್ವರಿನಗರ | 1 ತಂಡ | |
| | | **ಒಟ್ಟು** | **20 ತಂಡಗಳು** | |
| 4. | ಮಾರ್ಡನ್/ಗ್ರೀನ್ ಪೋಲೀಸ್ (ಪಿ–1852) | | | **8.00** |
| 5. | ಆನ್‌ಲೈನ್ ಮರಗಳ ಕಡಿತಲೆಯ ನಿರ್ವಹಣೆಗೆ ಅವಶ್ಯಕವಿರುವ ಸಾಮಗ್ರಿ ಮತ್ತು ಸಲಕರಣೆಗಳು (ಪಿ–1701) | | | **2.00** |

| | | | | |
|---|---|---|---|---|
| 6. | ರಸ್ತೆಬದಿ ಸಸಿಗಳನ್ನು ನೆಟ್ಟು ಪೋಷಿಸುವುದು (ಪಿ–03141) | ಪೂರ್ವ | 4000 | **155.36** |
| | | ಯಲಹಂಕ | 4500 | |
| | | ಮಹದೇವಪುರ | 2500 | |
| | | ದಾಸರಹಳ್ಳಿ | 2500 | |
| | | ಪಶ್ಚಿಮ | 2500 | |
| | | ದಕ್ಷಿಣ | 2500 | |
| | | ಬೊಮ್ಮನಹಳ್ಳಿ | 4500 | |
| | | ರಾಜರಾಜೇಶ್ವರಿನಗರ | 4000 | |
| | | **ಒಟ್ಟು ಸಸಿಗಳು** | 27000 | |
| | | **ಒಟ್ಟು** | | **1000.00** |

ಸದರಿ ಕಾಮಗಾರಿಗಳಿಗೆ ತೋಟಗಾರಿಕೆ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯಿಂದ ಆಡಳಿತಾತ್ಮಕ ಅನುಮೋದನೆ ಪಡೆಯಬೇಕಾಗಿದ್ದು. ಹಾಲಿ ತೋಟಗಾರಿಕೆ ಸ್ಥಾಯಿ ಸಮಿತಿಯು ತಾಂತ್ರಿಕವಾಗಿ ಆಸ್ತಿತ್ವದಲ್ಲಿ ಇಲ್ಲದೇ ಇರುವುದರಿಂದ ಈ ಕೆಳಕಂಡ ಅಂಶಗಳಿಗೆ ಅನುಮೋದನೆಯನ್ನು ಕೋರಿದೆ.

1. ಸದರಿ ಪ್ರಸ್ತಾಪಿತ ಕಾಮಗಾರಿಗಳ ಯೋಜನೆಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿದೆ.

2. ಸ್ಥಾಯಿ ಸಮಿತಿಯ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಸದರಿ ಪ್ರಸ್ತಾಪಿತ ಕಾಮಗಾರಿಗಳ ಯೋಜನೆಗಳಿಗೆ ತಗಲುವ ವೆಚ್ಚಕ್ಕೆ ಕಾಮಗಾರಿ ಸಂಕೇತವನ್ನು ನೀಡಲು, ಟೆಂಡರ್ ಆಹ್ವಾನಿಸಿ, ಸ್ಥಾಯಿ ಸಮಿತಿ, ಪಾಲಿಕೆ ಸಭೆಗೆ ಒಟ್ಟಾರೆಯಾಗಿ ಟೆಂಡರ್ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲು ಅನುಮೋದನೆ ಕೋರಿದೆ.

3. ಸದರಿ ಪ್ರಸ್ತಾಪಿತ ಕಾಮಗಾರಿಗಳ ಯೋಜನೆಗಳಿಗೆ ತಗಲುವ ವೆಚ್ಚವನ್ನು 2013–14ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ಅನುದಾನಕ್ಕಾಗಿ ಅವಕಾಶ ಕಲ್ಪಿಸಲು ಅನುಮೋದನೆ ಕೋರಿ ಮಹಾನಗರ ಪಾಲಿಕೆ ಸಭೆ ಹಾಗೂ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರವರ **ದಿನಾಂಕ:19–07–2013 ರ ಟಿಪ್ಪಣಿ.**

**<u>ನಿರ್ಣಯ</u>:– ಮುಂದೂಡಲಾಗಿದೆ.**

## 7.<u>ವಿಷಯದ ಸಂಖ್ಯೆ:ತೋ/ಸ್ಥಾ/ಸ/02/13–14, ದಿನಾಂಕ: 20–09–2013</u>

ವಾರ್ಡ್ ಸಂಖ್ಯೆ.174ರ ಬೊಮ್ಮನಹಳ್ಳಿ ವಲಯದ ವ್ಯಾಪ್ತಿಗೆ ಒಳಪಡುವ ಹೆಚ್.ಎಸ್.ಆರ್. ಬಡಾವಣೆ 4ನೇ ಸೆಕ್ಟರ್ ವರ್ತುಲ ರಸ್ತೆ, ಮೇಲ್ಸೇತುವೆ ಪಕ್ಕದ ಮೋರಿ ಹಾಗು 14ನೇ ಅಡ್ಡರಸ್ತೆ (ಹೆಚ್.ಪಿ.ಪೆಟ್ರೋಲ್ ಬಂಕ್ ಪಕ್ಕ) ನಡುವೆ ಇರುವ ಸಿಎ ಸೈಟ್‌ನಲ್ಲಿ ವೃಕ್ಷ ಉದ್ಯಾನವನವನ್ನು ಅಭಿವೃದ್ಧಿಗೊಳಿಸುವ ಕಾಮಗಾರಿಗೆ ಸಂಬಂಧಿಸಿದಂತೆ, ಮಾನ್ಯ ಆಯುಕ್ತರು ದಿನಾಂಕ:16–11–2012 ರಂದು ಎಸ್.ಎಂ.ಎಸ್. ಸಂದೇಶದಲ್ಲಿ ಸೂಚಿಸಿರುತ್ತಾರೆ ಹಾಗೂ ದಿನಾಂಕ:17–11–2012 ರಂದು ಅಪರ ಆಯುಕ್ತರು(ಬೊಮ್ಮನಹಳ್ಳಿ)ರವರು ಸಹ, ಸದರಿ ಜಾಗದಲ್ಲಿ ಉದ್ಯಾನವನವನ್ನು ಅಭಿವೃದ್ಧಿ ಪಡಿಸಲು ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚನೆ ನೀಡಿರುತ್ತಾರೆ. 2006–07ನೇ ಸಾಲಿನ ತೋಟಗಾರಿಕೆ ಇಲಾಖೆಯ ದರಪಟ್ಟಿಯನ್ನು ಅನುಸರಿಸಿ, ರೂ.27,50,000–00ಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ.

ಮೇಲ್ಕಂಡ ಉದ್ಯಾನವನದ ಅಭಿವೃದ್ಧಿಗೆ 2012–13ನೇ ಸಾಲಿನ ಆಯವ್ಯಯದಲ್ಲಿ ಯಾವುದೇ ಅನುದಾನ ನಿಗಧಿಪಡಿಸಿರುವುದಿಲ್ಲ. ಸದರಿ ಕಾಮಗಾರಿಯನ್ನು 2012–13ನೇ ಸಾಲಿನ ತುರ್ತು ಕೆಲಸಗಳಿಗಾಗಿ ಮೀಸಲಿಟ್ಟ ಅನುದಾನದ ಲೆಕ್ಕ ಶೀರ್ಷಿಕೆ P0541 (ಪುಟ ಸಂಖ್ಯೆ–55) ಅಡಿ ತೆಗೆದುಕೊಳ್ಳಲು ಅನುಮೋದನೆ ಕೋರಿದೆ.

ಈ ಕಾಮಗಾರಿಗೆ ಆಡಳಿತಾತ್ಮಕ, ತಾಂತ್ರಿಕ ಮಂಜೂರಾತಿ ಹಾಗೂ ಜಾಬ್‌ಕೋಡ್ ನೀಡುವ ಸಲುವಾಗಿ ಅನುಮೋದನೆಯನ್ನು ನೀಡಬೇಕೆಂದು ಕೋರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ)ರವರ **ದಿನಾಂಕ:14–03–2013 ರ ಟಿಪ್ಪಣಿ.**

| ಕ್ರ. ಸಂ | ವಾರ್ಡ್ ಸಂಖ್ಯೆ | ಕಾಮಗಾರಿ ಹೆಸರು | ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 01 | 174 – ಬೊಮ್ಮನಹಳ್ಳಿ | ಹೆಚ್.ಎಸ್.ಆರ್. ಬಡಾವಣೆ 4ನೇ ಸೆಕ್ಟರ್ ವರ್ತುಲ ರಸ್ತೆ ಮೇಲ್ಸೇತುವೆ ಪಕ್ಕದ ಮೋರಿ ಹಾಗೂ 14ನೇ ಅಡ್ಡರಸ್ತೆ (ಹೆಚ್.ಪಿ.ಪೆಟ್ರೋಲ್ ಬಂಕ್ ಪಕ್ಕ) ನಡುವೆ ಇರುವ ಸಿಎ ಸೈಟ್‌ನಲ್ಲಿ ವೃಕ್ಷ ಉದ್ಯಾನವನವನ್ನು ಅಭಿವೃದ್ಧಿಗೊಳಿಸುವ ಕಾಮಗಾರಿ | **27.50** |

**<u>ನಿರ್ಣಯ:–</u> ಈ ಪ್ರಸ್ತಾವನೆಯನ್ನು ಕೈಬಿಡಲಾಗಿದೆ.**

## 8. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/03/13–14, ದಿನಾಂಕ: 20–09–2013</u>

ಗಾಂಧಿನಗರ ವಿಧಾನ ಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ.94ರ ಗಾಂಧಿನಗರ ವ್ಯಾಪ್ತಿಯ ಕುಮಾರ ಪಾರ್ಕ್ ಪಶ್ಚಿಮದಲ್ಲಿರುವ ಮಕ್ಕಳ ಉದ್ಯಾನವನವು ನಿರ್ವಹಣೆ ಇಲ್ಲದೆ ದುರಸ್ಥಿಗೊಳಗಾಗಿದ್ದು, ಈ ಸಂಬಂಧ ದಿನಾಂಕ:20–05–2013 ರಂದು ಮಾನ್ಯ ಆಯುಕ್ತರು ರವರು, ಜಂಟಿ ಆಯುಕ್ತರು (ಪಶ್ಚಿಮ), ಮುಖ್ಯ ಅಭಿಯಂತರರು(ಪಶ್ಚಿಮ) ಮತ್ತು ಇತರೇ ಅಧಿಕಾರಿಗಳು ಸದರಿ ಉದ್ಯಾನವನಕ್ಕೆ ಭೇಟಿ ನೀಡಿ ತಪಾಸಣೆ ಮಾಡಲಾಗಿರುತ್ತದೆ. ತಪಾಸಣೆ ನಂತರ ಮಾನ್ಯ ಆಯುಕ್ತರವರು ಸದರಿ ಉದ್ಯಾನವನದ ದುರಸ್ಥಿ ಕೆಲಸ–ಕಾರ್ಯಗಳನ್ನು ಕೂಡಲೇ ಕೈಗೆತ್ತಿಕೊಂಡು ಎರಡು ದಿವಸಗಳೊಳಗಾಗಿ ಪೂರ್ಣಗೊಳಿಸಲು ಮೌಖಿಕವಾಗಿ ಆದೇಶಿಸಿರುವುದರಿಂದ, ಸದರಿ ಮಕ್ಕಳ ಉದ್ಯಾನವನಕ್ಕೆ ದುರಸ್ಥಿ ಕೆಲಸ–ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ರೂ.4.00 ಲಕ್ಷ ಮೊತ್ತದ ಅಂದಾಜುಪಟ್ಟಿಯನ್ನು 2012–13ನೇ ಸಾಲಿನ ದರಗಳನ್ವಯ ತಯಾರಿಸಲಾಗಿರುತ್ತದೆ.

ಮಾನ್ಯ ಆಯುಕ್ತರವರು ಕುಮಾರ ಪಾರ್ಕ್ ಪಶ್ಚಿಮದಲ್ಲಿರುವ ಮಕ್ಕಳ ಉದ್ಯಾನವನದ ದುರಸ್ಥಿ ಕೆಲಸ ಕಾರ್ಯಗಳನ್ನು ಕೂಡಲೇ ಕೈಗೆತ್ತಿಕೊಳ್ಳಲು ಸೂಚಿಸಿರುವುದರಿಂದ, ಈಗಾಗಲೇ ಸದರಿ ಉದ್ಯಾನವನದಲ್ಲಿ ಅತ್ಯಾವಶ್ಯಕ ತುರ್ತು ದುರಸ್ಥಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ. ಈ ಕ್ರಮವನ್ನು ಸ್ಥಿರೀಕರಿಸಲು ಹಾಗೂ ಈ ಸಂಬಂಧ ನಡಯುವ ಎಲ್ಲಾ ಆಡಳಿತಾತ್ಮಕ ಮತ್ತು ತಾಂತ್ರಿಕ

ಪ್ರಕ್ರಿಯೆಗಳ ಘಟನೋತ್ತರ ಅನುಮೋದನೆ ಕೋರಿ ಸದರಿ ಕಾಮಗಾರಿಯನ್ನು ತುರ್ತು ಕಾಮಗಾರಿಗಳ ಪಿ–0541ರ ಅಡಿಯಲ್ಲಿ ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ಮತ್ತು ಜಾಬ್ ಸಂಖ್ಯೆ ನೀಡಲು ಕೋರುತ್ತಾ ಹಾಗೂ ಸದರಿ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸಬೇಕಾಗಿರುವುದರಿಂದ, ಈ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್.ಸಂಸ್ಥೆಯವರ ಮುಖಾಂತರ ನಿರ್ವಹಿಸಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರವರ **ದಿನಾಂಕ:28–05–2013 ರ ಟಿಪ್ಪಣಿ.**

| Sl. No. | Name of the Work | Est. Cost (Rs. in Lakhs) |
|---|---|---|
| 01 | Repairs and improvement works to children’s park at Kumara Park West, Nehru Nagar in Ward No.94, Gandhinagar | 4.00 |

**<u>ನಿರ್ಣಯ:–</u> ಮಾನ್ಯ ಆಯುಕ್ತರವರ ದಿನಾಂಕ:28–05–2013 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

**9. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/04/13–14, ದಿನಾಂಕ: 20–09–2013</u>**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 55 ಕೆರೆಗಳಿದ್ದು, 30 ಕೆರೆಗಳನ್ನು ಪಾಲಿಕೆಯ ವತಿಯಿಂದ ಈಗಾಗಲೇ ಅಭಿವೃದ್ಧಿಪಡಿಸಿದ್ದು, ಉಳಿದ 25 ಕೆರೆಗಳ ಅಭಿವೃದ್ಧಿಯ ಕಾರ್ಯ ವಿವಿಧ ಹಂತದ ಪ್ರಗತಿಯಲ್ಲಿದೆ. ಈಗಾಗಲೇ ಅಭಿವೃದ್ಧಿಪಡಿಸಲಾಗಿರುವ ಕೆರೆಗಳ ಸಂರಕ್ಷಣೆ ಮತ್ತು ಕೆರೆಯ ಸ್ವತ್ತನ್ನು ಕಾಪಾಡಲು ಹಾಗೂ ನಿರ್ವಹಣೆ ಮಾಡಲು ಕೆಳಕಂಡ ಕಾರ್ಯಗಳನ್ನು ಕೈಗೊಳ್ಳುವುದು ಅತ್ಯಾವಶ್ಯಕವಾಗಿರುತ್ತದೆ.

1) ಕೆರೆಗಳ ಸಂರಕ್ಷಣೆ ಮತ್ತು ಕೆರೆಯ ಸ್ವತ್ತನ್ನು ಕಾಪಾಡಲು ಹಾಗೂ ಯಾವುದೇ ರೀತಿಯ ಕಾನೂನು ಬಾಹಿರ ಘಟನೆಗಳು ನಡೆಯದಂತೆ ತಡೆಯಲು ಕೆರೆಯಲ್ಲಿ ಮೀನು ಹಿಡಿಯುವುದನ್ನು ತಡೆಗಟ್ಟಲು ಹಾಗೂ ಬಿ.ಬಿ.ಎಂ.ಪಿ. ನಿಗಧಿಪಡಿಸಿರುವ ವೇಳೆಯಲ್ಲಿ ಮಾತ್ರ ಸಾರ್ವಜನಿಕರಿಗೆ ಉಚಿತ ಪ್ರವೇಶ ನೀಡಲು, ಕಾವಲುಗಾರರ ಸೇವೆಯನ್ನು ದಿನದ 24 ಗಂಟೆಗಳಿಗೂ ನೇಮಿಸುವುದು.

2) ಸಾರ್ವಜನಿಕರು ಕೆರೆಯ ಒಳಗೆ ತ್ಯಾಜ್ಯ ವಸ್ತುಗಳನ್ನು ತಂದು ಹಾಕದಂತೆ ಹಾಗೂ ಒಂದು ಪಕ್ಷ ತ್ಯಾಜ್ಯ ವಸ್ತುಗಳು ಕೆರೆಯಲ್ಲಿ ಬಂದಲ್ಲಿ ಅವುಗಳನ್ನು ಒಂದು ಜಾಗದಲ್ಲಿ ಸಂಗ್ರಹಿಸಿ ನಾಶ ಮಾಡುವುದು.

3) ಕೆರೆಯಲ್ಲಿನ ಏರಿ, ಕಲ್ಯಾಣಿ, ವೆಟ್‌ಲ್ಯಾಂಡ್, ಸೆಡಿಮೇಂಟೇಷನ್ ಟ್ಯಾಂಕ್‌ನಲ್ಲಿ ಬೆಳೆಯುವ ಗಿಡಗಂಟೆಗಳನ್ನು ಮತ್ತು ಮತ್ತಿತರ ಕಳೆಗಳನ್ನು ಆಗಿಂದಾಗ್ಗೆ ತೆಗೆದು ಹಾಕುವುದು.

4) ಕೆರೆಗಳಲ್ಲಿ ಅಳವಡಿಸಿರುವ ವಿದ್ಯುತ್ ದೀಪಗಳನ್ನು ಕಾಲಕಾಲಕ್ಕೆ ಪರಿಶೀಲಿಸಿ, ದುರಸ್ಥಿಪಡಿಸುವುದು.

5) ಕೆರೆಗಳಲ್ಲಿನ ಪಾದಚಾರಿ ಮಾರ್ಗಗಳಲ್ಲಿ ಕಸ ಗುಡಿಸುವುದು, ಸ್ವಚ್ಛತೆಯನ್ನು ಕಾಪಾಡುವುದು, ಅಂಗಳದಲ್ಲಿನ ಮರ–ಗಿಡಗಳಿಗೆ ನೀರುಣಿಸುವುದು, ಇತ್ಯಾದಿ.

6) ಕೆರೆಯ ಅಂಗಳದಲ್ಲಿರುವ ಸಾರ್ವಜನಿಕ ಶೌಚಾಲಯಗಳ ಸ್ವಚ್ಛತೆಯನ್ನು ಕಾಪಾಡುವುದು ಹಾಗೂ ನಿರ್ವಹಿಸುವುದು.

7) ಕೆರೆಯ ಅಂಗಳದಲ್ಲಿ ಮಕ್ಕಳ ಆಟಿಕೆಯ ಸರಂಜಾಮುಗಳನ್ನು ಅಳವಡಿಸಿದ್ದರೆ ಅವುಗಳು ಹಾಳಾದ ಪಕ್ಷದಲ್ಲಿ ಸರಿಪಡಿಸಲು ಕ್ರಮ ಜರುಗಿಸುವುದು.

8) ಕೆರೆಗಳಿಗೆ ಕಲುಷಿತ ನೀರು ಹರಿಯುವುದನ್ನು ತಡೆಯುವುದು.

9) ಕೆರೆಗಳ ಅಂಗಳದಲ್ಲಿ ಕಾರಂಜಿ/ದೀಪದ ಕಾರಂಜಿ ಅಳವಡಿಸಿದ್ದರೆ ಅವುಗಳ ದುರಸ್ಥಿಗೆ ಬಂದಲ್ಲಿ ಅವುಗಳನ್ನು ಸರಿಪಡಿಸುವುದು.

10) ಕೆರೆಗಳ ನಿರ್ವಹಣೆಯಲ್ಲಿ ಬಳಸಿಕೊಳ್ಳುವ ವಿದ್ಯುತ್ಶಕ್ತಿ ಮತ್ತು ನೀರಿನ ವೆಚ್ಚವನ್ನು ಬಿ.ಬಿ.ಎಂ.ಪಿ.ಯಿಂದ ಪಾವತಿಸುವುದು.

11) ಕೆರೆಗಳ ಅಂಗಳದಲ್ಲಿ ಕಲ್ಯಾಣಿ ನಿರ್ಮಿಸಿದ್ದರೆ ಹಬ್ಬಗಳ ಸಮಯದಲ್ಲಿ ಇವುಗಳ ನಿರ್ವಹಣೆ ಮಾಡುವುದು.

ಈ ಎಲ್ಲಾ ಕಾರ್ಯಗಳನ್ನು ಬಿ.ಬಿ.ಎಂ.ಪಿ.ಯಿಂದ ನಿರ್ವಹಿಸಲು ಕೆರೆಗಳ ವಿಸ್ತರಣೆಯಾನುಸಾರ ಒಂದು ವರ್ಷಕ್ಕೆ ಅಂದಾಜು ರೂ.10.00 ಲಕ್ಷದಿಂದ ರೂ.900.00 ಲಕ್ಷದವರೆಗೂ ವೆಚ್ಚವಾಗುತ್ತದೆ.

ಅಭಿವೃದ್ಧಿಪಡಿಸಿದ ಕೆರೆಗಳನ್ನು ಹಾಗೂ ಕೆರೆಗಳಲ್ಲಿನ ಸುತ್ತಮುತ್ತಲಿನ ಉದ್ಯಾನವನವು ಸಹ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿದ್ದು ಅದರ ನಿರ್ವಹಣೆಯು ಕೂಡ ಬಿ.ಬಿ.ಎಂ.ಪಿ. ವತಿಯಿಂದಲೇ ನಿರ್ವಹಿಸುತ್ತಿದ್ದರೆ ಅವುಗಳ ನಿರ್ವಹಣೆಗಾಗಿ ಮೇಲೆ ತಿಳಿಸಿರುವ ಕೆಲಸಗಳನ್ನು ಪೂರ್ಣವಾಗಿ ಅಥವ ಭಾಗಶಃ ಕೆಲಸಗಳನ್ನು ನಿರ್ವಹಿಸಲು ಯಾವುದೇ ಸಾಮಾಜಿಕ ಕಳಕಳಿ ಹೊಂದಿರುವ ಸಂಘ–ಸಂಸ್ಥೆಗಳು / ಸರ್ಕಾರೇತರ ಸಂಸ್ಥೆಗಳು / ಸ್ಥಳೀಯ ನಾಗರೀಕ ಸಂಘಗಳು / ಕಾರ್ಪೋರೇಟ್ ಸಂಸ್ಥೆಗಳು ಅಥವಾ ಸ್ವಯಂ ಪ್ರೇರಿತವಾಗಿ ಜಂಟಿ ಸಂಸ್ಥೆಗಳು ಮುಂದೆ ಬಂದರೆ ಅವರೊಂದಿಗೆ ಕೆಳಕಂಡ ಷರತ್ತಿನೊಂದಿಗೆ ಒಡಂಬಡಿಕೆ (MOU) ಮಾಡಿಕೊಳ್ಳುವುದರಿಂದ ಪಾಲಿಕೆಗೆ ಪ್ರತಿ ಕೆರೆಗೆ ವಿಸ್ತರಣೆಯಾನುಸಾರ ಕನಿಷ್ಟ ರೂ.10.00 ಲಕ್ಷದಿಂದ ಗರಿಷ್ಟ ರೂ.90.00 ಲಕ್ಷದಂತೆ ಕೆರೆಗಳ ನಿರ್ವಹಣೆ ಮೊತ್ತದ ಹೊರೆ ಕಡಿಮೆಯಾಗುತ್ತದೆ.

ಈ ಹಿನ್ನೆಲೆಯಲ್ಲಿ ಯಾವುದೇ ಸಂಘ–ಸಂಸ್ಥೆಗಳು/ ಸರ್ಕಾರೇತರ ಸಂಸ್ಥೆಗಳು/ ಸ್ಥಳೀಯ ನಾಗರೀಕ ಸಂಘಗಳು/ ಕಾರ್ಪೋರೇಟ್ ಸಂಸ್ಥೆಗಳು ಅಥವಾ ಸ್ವಯಂ ಪ್ರೇರಿತವಾಗಿ ಜಂಟಿ ಸಂಸ್ಥೆಗಳು ಕೆರೆಗಳ ಹಾಗೂ ಉದ್ಯಾನವನಗಳಲ್ಲಿನ ಮೇಲ್ವಿಚಾರಣೆಯನ್ನು ನಿರ್ವಹಿಸಲು ಮುಂದೆ ಬಂದಲ್ಲಿ ಸದರಿ ಸಂಸ್ಥೆಗಳೊಂದಿಗೆ ಕೆಳಕಂಡ ಷರತ್ತುಗಳೊಂದಿಗೆ ಜಂಟಿ ಒಡಂಬಡಿಕೆ (MOU) ಮಾಡಿಕೊಳ್ಳಬಹುದಾಗಿದೆ.

1. ಈ ಒಡಂಬಡಿಕೆಯ ಅನುಮತಿಯು ಸ್ಥಳದ ಸ್ವಾಮಿತ್ವ, ಭೋಗ್ಯ ಅಥವಾ ಮತ್ತಾವುದೇ ಅಧಿಕಾರಕ್ಕೆ ಒಳಪಡುವುದಿಲ್ಲ.

2. ಒಡಂಬಡಿಕೆಯಲ್ಲಿರುವ ಉದ್ದೇಶಗಳನ್ನು ಯಾರಿಗೂ ಹಸ್ತಾಂತರಿಸಬಾರದು ಹಾಗೂ ಒಡಂಬಡಿಕೆಯಲ್ಲಿರುವ ಉದ್ದೇಶಗಳನ್ನು ಯಾವ ಕಾರಣಕ್ಕಾಗಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಮಾತ್ರ ಬಳಸಿಕೊಳ್ಳುವುದು.
3. ಕೆರೆಯಲ್ಲಿ ಹಾಗೂ ಕೆರೆಗೆ ಹೊಂದಿಕೊಂಡಿರುವ ಉದ್ಯಾನವನದಲ್ಲಿ ಸಾಕುಪ್ರಾಣಿಗಳ ಪ್ರವೇಶ, ಅನುಚಿತ ಚಟುವಟಿಕೆಗಳು, ಕೆರೆಯಲ್ಲಿ ಈಜಾಡುವುದು, ಮೀನು ಹಿಡಿಯುವುದು ಅಥವಾ ನೀರಿನಲ್ಲಿ ಆಟವಾಡುವುದನ್ನು ನಿಷೇಧಿಸಿದೆ.
4. ಕೆರೆಯ ಮತ್ತು ಕೆರೆಗೆ ಹೊಂದಿಕೊಂಡಿರುವ ಉದ್ಯಾನವನದಲ್ಲಿ ತಿನ್ನುವ ಪದಾರ್ಥವನ್ನು ತರುವುದು ಹಾಗೂ ಒಳಗೆ ವ್ಯಾಪಾರ ಮಾಡುವುದನ್ನು ನಿಷೇಧಿಸಿದೆ.
5. ಒಡಂಬಡಿಕೆದಾರರು ಯಾವುದೇ ರೀತಿಯ ಜಾಹೀರಾತು ಪ್ರದರ್ಶಿಸಬೇಕಾದಲ್ಲಿ, 1.5X1.5 ಅಡಿಯ Signage Board ಮತ್ತು ಲೋಗೋ ಪ್ರದರ್ಶನ ಸ್ಥಳವನ್ನು ಆಯುಕ್ತರು ಅಥವಾ ಅವರಿಂದ ಅಧಿಕಾರ ಪಡೆದ ಅಧಿಕಾರಿಗಳಿಂದ ಅನುಮೋದನೆ ಪಡೆದು ಕೆರೆಯ ಉದ್ಯಾನವನದಲ್ಲಿ ಪ್ರದರ್ಶಿಸುವುದು.
6. ಬಿ.ಬಿ.ಎಂ.ಪಿ. ನಿಗಧಿಪಡಿಸಿದ ವೇಳೆಗಳಲ್ಲಿ ಮಾತ್ರ ಸಾರ್ವಜನಿಕರಿಗೆ ಉಚಿತ ಪ್ರವೇಶ ನೀಡುವುದು.
7. ಕೆರೆಯ ಮತ್ತು ಉದ್ಯಾನವನದ Landscape ವಿನ್ಯಾಸ ಮತ್ತು ಅದನ್ನು ಅನುಷ್ಠಾನ ಮಾಡುವ ಪಕ್ಷದಲ್ಲಿ ಆಯುಕ್ತರು ಅಥವಾ ಅವರಿಂದ ಅಧಿಕಾರ ಪಡೆದ ಅಧಿಕಾರಿಗಳಿಂದ ಅನುಮೋದನೆ ಪಡೆಯುವುದು.
8. ಕೆರೆಯ ಮತ್ತು ಉದ್ಯಾನವನದ ನಿರ್ವಹಣೆಯ ಅವಧಿಯಲ್ಲಿ ಬಿ.ಬಿ.ಎಂ.ಪಿ. ವಿಧಿಸುವ ಯಾವುದೇ ರೀತಿಯ ಷರತ್ತುಗಳು/ನಿರ್ಬಂಧನೆ, ಆದೇಶಗಳು ಮತ್ತು ನಿರ್ದೇಶನಗಳನ್ನು ಪಾಲಿಸುವುದು.
9. ಕೆರೆಯ ಮತ್ತು ಉದ್ಯಾನವನದ ನಿರ್ವಹಣೆಯ ಅವಧಿಯಲ್ಲಿ ಬಿ.ಬಿ.ಎಂ.ಪಿ. ಅಧಿಕಾರಿಗಳು ಯಾವುದೇ ಸಮಯದಲ್ಲಿ ಜಂಟಿ ತಪಾಸಣೆಯನ್ನು ನಡೆಸಿದಾಗ ಸೂಚಿಸುವ ಅಂಶಗಳನ್ನು ಜಾರಿಗೆ ತರುವುದು.
10. ಕೆರೆಯ ಅವರಣದಲ್ಲಿ ಯಾವುದೇ ಲಾಭದಾಯಕ ಚಟುವಟಿಕೆಗಳನ್ನು ನಡೆಸಬಾರದು.
11. ಪಾಲಿಕೆಯು ಯಾವುದೇ ಸಮಯದಲ್ಲಿ ಸಂಸ್ಥೆಯನ್ನು ನಿರ್ವಹಣೆಯಿಂದ ಬಿಡುಗಡೆ ಗೊಳಿಸಬಹುದು.
12. ಸಂಸ್ಥೆಯವರು ನೇಮಿಸಿಕೊಳ್ಳುವ ಸಿಬ್ಬಂದಿಯ ವೇತನ, ಜೀವವಿಮೆ, ಇ.ಎಸ್.ಐ. ಹಾಗೂ ಇತರೇ ಎಲ್ಲಾ ಖರ್ಚು ವೆಚ್ಚಗಳಿಗೆ ಸಂಸ್ಥೆಯೇ ಜವಾಬ್ದಾರಿಯಾಗಿರುತ್ತದೆ.

ಮುಂದುವರೆಯುತ್ತಾ, ಯಾವುದೇ ಸಂಘ–ಸಂಸ್ಥೆಗಳು/ಸರ್ಕಾರೇತರ ಸಂಸ್ಥೆಗಳು/ಸ್ಥಳೀಯ ನಾಗರೀಕ ಸಂಘಗಳು/ಕಾರ್ಪೋರೇಟ್ ಸಂಸ್ಥೆಗಳು ಅಥವಾ ಸ್ವಯಂ ಪ್ರೇರಿತವಾಗಿ ಜಂಟಿ ಸಂಸ್ಥೆಗಳು ಸಾರ್ವಜನಿಕ

ಸಾಮಾಜಿಕ ಹಾಗೂ ಪರಿಸರ ಸಂರಕ್ಷಣೆಯ ಬಗ್ಗೆ ಕಳಕಳಿ ಹೊಂದಿ ಯಾವುದೇ ಆರ್ಥಿಕ ಪ್ರತಿಫಲಾಪೇಕ್ಷೆಯನ್ನು ಬಯಸದೆ ಕೆರೆಗಳ ಸಂರಕ್ಷಣೆಗೆ ಮುಂದೆ ಬಂದರೆ ಮೂರು ವರ್ಷದ ಅವಧಿಯವರೆಗೆ ಮೇಲೆ ತಿಳಿಸಿರುವ ಷರತ್ತುಗಳಿಗೆ ಒಡಂಬಡಿಕೆ ಮಾಡಿಕೊಳ್ಳಲು ಅನುಮೋದನೆಗಾಗಿ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರವರ **ದಿನಾಂಕ:01–08–2013 ರ ಟಿಪ್ಪಣಿ.**

**<u>ನಿರ್ಣಯ:</u>– ಸ್ಥಳ ಪರಿಶೀಲನೆಗೆ ಮುಂದೂಡಿದೆ.**

**10. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/05/13–14, ದಿನಾಂಕ: 25–09–2013</u>**

ವಾರ್ಡ್ ನಂ.90 ರಲ್ಲಿ ಬರುವ ಹಲಸೂರು ಕೆರೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಅಭಿವೃದ್ಧಿಪಡಿಸಿದ್ದು, ಸದರಿ ಕೆರೆಯಲ್ಲಿ ಸಾರ್ವಜನಿಕರು ಯಾವುದೇ ತೊಂದರೆಯಾಗದಂತೆ ವಾಯುವಿಹಾರ ಮಾಡಲು ಪಾದಚಾರಿ ಮಾರ್ಗಗಳನ್ನು ನಿರ್ಮಿಸಲಾಗಿರುತ್ತದೆ ಹಾಗೂ ಸದರಿ ಕೆರೆಯ ರಕ್ಷಣೆಗಾಗಿ ರಕ್ಷಣಾ ಸಿಬ್ಬಂದಿಗಳನ್ನು ನಿಯೋಜಿಸಿದ್ದು, ಕೆರೆಯ ನಿರ್ವಹಣೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯೇ ನಿರ್ವಹಿಸುತ್ತಿರುತ್ತದೆ.

RMZ Corp ಸಂಸ್ಥೆಯವರು, ಕೆರೆಯ ಅಂಗಳದ ಉದ್ಯಾನವನದಲ್ಲಿ ಸಾರ್ವಜನಿಕರಿಗೆ ಆರೋಗ್ಯಕರ ವಾತಾವರಣವನ್ನು ಸೃಷ್ಟಿಸುವ ಸಲುವಾಗಿ ಹಾಗೂ ವಾಯು ವಿಹಾರದ ಜೊತೆಗೆ ವ್ಯಾಯಾಮಗಳನ್ನು ಮಾಡಲು ಸಹ ಅನುಕೂಲವಾಗುವಂತೆ ಸಂಸ್ಥೆಯ ವೆಚ್ಚದಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ವಿನೂತನ ಮಾದರಿಯ ವ್ಯಾಯಾಮ ಉಪಕರಣಗಳನ್ನು Istanbul Turkey ಯಿಂದ ಅಮದು ಮಾಡಿಕೊಂಡು ಸದರಿ ಕೆರೆಯ ಅಂಗಳದಲ್ಲಿ ಅಳವಡಿಸಲು ಮತ್ತು ವ್ಯಾಯಾಮ ಉಪಕರಣಗಳನ್ನು ಅಳವಡಿಸುವ ಸ್ಥಳದಲ್ಲಿ "RMZ Corp Park" ಎಂಬ ನಾಮಫಲಕವನ್ನು ಪ್ರದರ್ಶಿಸುವುದಾಗಿ ಹಾಗೂ ಉದ್ಯಾನವನದ ವ್ಯಾಪ್ತಿಯಲ್ಲಿ ಸಂಸ್ಥೆಯ ನಾಮಫಲಕಗಳ ಪ್ರದರ್ಶನಕ್ಕಾಗಿ ಅನುಮತಿಯನ್ನು ಕೋರಿರುತ್ತಾರೆ.

ತದನಂತರ, ಸಂಸ್ಥೆಯವರು ಅಳವಡಿಸುವ ಉಪಕರಣಗಳ ಸಂರಕ್ಷಣೆ ಮತ್ತು ದೀರ್ಘ ಬಾಳಿಕೆಯ ಹಿತದೃಷ್ಠಿಯಿಂದ ಉಪಕರಣಗಳ ಮೇಲು ಉಸ್ತುವಾರಿಯನ್ನು ಬಿ.ಬಿ.ಎಂ.ಪಿ. ವತಿಯಿಂದಲೇ ನಿರ್ವಹಿಸಲು ಕೋರಿದ್ದು, ಸದರಿ ಸಂಸ್ಥೆಯವರಿಗೆ ಹಲಸೂರು ಕೆರೆಯಲ್ಲಿ ವ್ಯಾಯಾಮ ಉಪಕರಣಗಳನ್ನು ಅಳವಡಿಸಲು ಕೆಲವು ನಿಬಂಧನೆಗಳೊಂದಿಗೆ ಅನುಮತಿಯನ್ನು ನೀಡಲು ಮತ್ತು ಸದರಿ ವ್ಯಾಯಾಮ ಉಪಕರಣಗಳ ನಿರ್ವಹಣೆ ಮೇಲು ಉಸ್ತುವಾರಿಯನ್ನು ನೋಡಿಕೊಳ್ಳಲು ಶಿಕ್ಷಣ ಇಲಾಖೆ, ದೈಹಿಕ ಶಿಕ್ಷಣ ಅಧಿಕಾರಿಗಳು, ಬಿ.ಬಿ.ಎಂ.ಪಿ. ರವರಿಗೆ ನೀಡಲು ಮುಖ್ಯ ಅಭಿಯಂತರು, ಕೆರೆಗಳು ವಿಭಾಗದಿಂದ ಕಡತವನ್ನು ಮಂಡಿಸಿದ್ದು, ಸದರಿ ಕಡತದ ಟಿಪ್ಪಣಿ ಹಾಳೆಯ ಪುಟ ಸಂ.3 ರ ಕಂಡಿಕೆ (11)ರಲ್ಲಿ ಇದನ್ನು ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರು ಅನುಮೋದಿಸಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಈ ಕೆಳಕಂಡ ನಿಬಂಧನೆಗಳೊಂದಿಗೆ RMZ Corp ಸಂಸ್ಥೆಯವರಿಗೆ ವ್ಯಾಯಾಮ ಉಪಕರಣಗಳನ್ನು ಹಲಸೂರು ಕೆರೆಯ ಅಂಗಳದಲ್ಲಿ ಅಳವಡಿಸಲು ಅನುಮೋದನೆಯನ್ನು ನೀಡಬಹುದಾಗಿರುತ್ತದೆ.

**<u>ನಿಬಂಧನೆಗಳು:–</u>**

1. ಹಲಸೂರು ಕೆರೆಯ ಉದ್ಯಾನವನದ ಹಕ್ಕು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುತ್ತದೆ.

2. ವಿವಿಧ ನಮೂನೆಯ ವ್ಯಾಯಾಮ ಉಪಕರಣಗಳನ್ನು ಅಳವಡಿಸುವಾಗ ಹಲಸೂರು ಕೆರೆಗೆ ಹಾಗೂ ಉದ್ಯಾನವನದ ಸ್ವತ್ತಿಗೆ ಯಾವುದೇ ಹಾನಿಯಾಗದಂತೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗದಂತೆ ನಿರ್ವಹಣೆ ಮಾಡಬೇಕಾಗಿರುತ್ತದೆ.

3. RMZ Corp ಸಂಸ್ಥೆಯವರ ಪ್ರಾಯೋಜಕರ ಪ್ರದರ್ಶನ ನಾಮಫಲಕವು 1.5X0.5 ಅಡಿಯ ಅಳತೆಗಿಂತ ಹೆಚ್ಚಿರಬಾರದು. ಪ್ರಾಯೋಜಕ ಸಂಸ್ಥೆಯ ನಾಮಫಲಕ ಹಾಗೂ ಲೋಗೋ ಪ್ರದರ್ಶನ ಸ್ಥಳವನ್ನು ಆಯುಕ್ತರು ಅಥವಾ ಅವರಿಂದ ಅಧಿಕಾರ ಪಡೆದ ಅಧಿಕಾರಿಗಳಿಂದ ಅನುಮತಿ ಪಡೆಯಬೇಕು.

4. RMZ Corp ಸಂಸ್ಥೆಯವರು, ಅಳವಡಿಸಿದ ವ್ಯಾಯಾಮ ಉಪಕರಣಗಳನ್ನು ಉಪಯೋಗಿಸುವ ಸೂಚನೆಗಳ ನಾಮಫಲಕ ಅಳವಡಿಸಲು ಸೂಚಿಸಿದೆ ಹಾಗೂ ಅಳವಡಿಸಿದ ವ್ಯಾಯಾಮ ಉಪಕರಣಗಳ ಸ್ಥಳದಲ್ಲಿ ಯಾವುದೇ ತರದ ಛಾವಣಿಯನ್ನು ಅಳವಡಿಸದಿರಲು ಸೂಚಿಸಿದೆ.

5. ಹಲಸೂರು ಕೆರೆಯ ಉದ್ಯಾನವನದಲ್ಲಿ ಅಳವಡಿಸುವ ವ್ಯಾಯಾಮ ಉಪಕರಣಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ವತ್ತಾಗಿರುತ್ತದೆ.

6. RMZ Corp ಸಂಸ್ಥೆಯವರು ಮಹಾನಗರ ಪಾಲಿಕೆ / ಲಾಂಛನವನ್ನು ಕನ್ನಡ ಮತ್ತು ಅಂಗ್ಲ ಭಾಷೆಯಲ್ಲಿ ಪ್ರಮುಖ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು.

ಮುಂದುವರೆಯುತ್ತಾ, ಮೇಲಿನ ನಿಬಂಧನೆಗಳನ್ನೊಳಗೊಂಡ ಅನುಮತಿ ಪತ್ರದ ಅನುಮೋದನೆಯನ್ನು ಸಕ್ಷಮ ಪ್ರಾಧಿಕಾರವಾದ ತೋಟಗಾರಿಕೆ ಸ್ಥಾಯಿ ಸಮಿತಿಯಿಂದ ಪಡೆಯಬೇಕಾಗಿರುವ ಪ್ರಯುಕ್ತ, ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ **ದಿನಾಂಕ:21–09–2013 ರ ಟಿಪ್ಪಣಿ.**

**<u>ನಿರ್ಣಯ:–</u> ಸ್ಥಳ ಪರಿಶೀಲನೆಗೆ ಮುಂದೂಡಲಾಗಿದೆ.**

**11. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/06/13–14, ದಿನಾಂಕ: 08–10–2013</u>**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅರಣ್ಯ ಘಟಕದ ವ್ಯಾಪ್ತಿಗೆ ಬರುವ ಎಂಟು ವಲಯಗಳಾದ ಪೂರ್ವ, ಯಲಹಂಕ, ದಾಸರಹಳ್ಳಿ, ಮಹದೇವಪುರ, ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ ಮತ್ತು ರಾಜರಾಜೇಶ್ವರಿನಗರ ವಲಯಗಳಲ್ಲಿ, 2013–14ನೇ ಸಾಲಿನ ಅರಣ್ಯೀಕರಣ ಕಾಮಗಾರಿಗಳಾದ ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ, ಒಂದು ಮತ್ತು ಎರಡನೇ ಸಾಲಿನ ಹಳೆಯ ನೆಡುತೋಪು ನಿರ್ವಹಣೆ, ಸಸ್ಯಕ್ಷೇತ್ರಗಳಲ್ಲಿ ಸಸಿಗಳನ್ನು ನಿರ್ವಹಿಸುವ ಮತ್ತು ಮುಂದಿನ ಸಾಲಿಗೆ ಸಸಿಗಳನ್ನು ಬೆಳೆಸಿ ಪೋಷಿಸುವ ಕಾಮಗಾರಿ ಹಾಗೂ ಮರಗಳ ವ್ಯವಸ್ಥಿತ ನಿರ್ವಹಣೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಒಟ್ಟು **ರೂ.2970.50** ಲಕ್ಷಗಳಿಗೆ ಕ್ರಿಯಾ ಯೋಜನೆಯನ್ನು ತಯಾರಿಸಿ ಅರಣ್ಯ ಘಟಕದ ವತಿಯಿಂದ

ಸಲ್ಲಿಸಿರುತ್ತಾರೆ. ಸದರಿ ಕಾಮಗಾರಿಗಳಿಗೆ ತಗಲುವ ಅಂದಾಜು ವೆಚ್ಚ ರೂ.1662.00 ಲಕ್ಷಗಳಾಗಲಿದ್ದು, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸುತ್ತಾ, ಕ್ರಿಯಾ ಯೋಜನೆಯನ್ನು ಮಂಜೂರು ಮಾಡಲು ಹಾಗೂ ಕ್ರಿಯಾ ಯೋಜನೆ ವ್ಯಾಪ್ತಿಯಲ್ಲಿ ಪ್ರತಿ ಕಾಮಗಾರಿಗೆ ಕಾಮಗಾರಿ ಸಂಕೇತವನ್ನು ಪಡೆಯಲು ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರವರ **ದಿನಾಂಕ:05-10-2013 ರ ಟಿಪ್ಪಣಿ.**

**ನಿರ್ಣಯ:-** **ಮುಂದೂಡಲಾಗಿದೆ.**

12. **ವಿಷಯದ ಸಂಖ್ಯೆ: ತೋ.ಸ್ಥಾ.ಸ./ 07/2012-13, ದಿನಾಂಕ:09-10-2013**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 198 ವಾರ್ಡ್‌ಗಳಲ್ಲಿ ಬರುವ ಉದ್ಯಾನವನಗಳ ಅಭಿವೃದ್ಧಿ ಹಾಗೂ ನಿರ್ವಹಣೆಗೆ 2013-14ನೇ ಸಾಲಿನ ಆಯವ್ಯಯದಲ್ಲಿ ಈ ಕೆಳಕಂಡ ಲೆಕ್ಕಶೀರ್ಷಿಕೆಯ ಅನುದಾನದಡಿಯಲ್ಲಿ ಕಾಯ್ದಿರಿಸಿರುವಂತೆ, ಮಾನ್ಯ ಆಯುಕ್ತರು ದಿನಾಂಕ:11-09-2013ರ ಸುತ್ತೋಲೆಯ ಪ್ರಕಾರ, ಕಾರ್ಯಕ್ರಮ(ಪಿ.ಓ.ಡಬ್ಲ್ಯೂ.) ಪಟ್ಟಿಯನ್ನು ತಯಾರಿಸಲು ಸಮಿತಿಯು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡ ರೀತಿಯಲ್ಲಿ ಅನುಮೋದನೆ ಪಡೆಯುವಂತೆ ತೀರ್ಮಾನಿಸಿದೆ.

| ಕ್ರ. ಸಂ. | ಶೀರ್ಷಿಕೆ ವಿವರ | ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | ನರ್ಸರಿ ಅಭಿವೃದ್ಧಿ ಮತ್ತು ಹೊಸ ತಳಿಗಳ ಅಭಿವೃದ್ಧಿ. | 10.00 |
| 2 | ಕೊಳವೆ ಬಾವಿಗಳನ್ನು ಕೊರೆಯುವುದು ಮತ್ತು ನಿರ್ವಹಣೆ, ಪೈಪ್‌ಲೈನ್‌ಗಳನ್ನು ಅಳವಡಿಸುವುದು, ಇತ್ಯಾದಿ. | 10.00 |
| 3 | ಗುತ್ತಿಗೆ ಆಧಾರದ ಮೇಲೆ ಉದ್ಯಾನವನಗಳ ನಿರ್ವಹಣೆ. | 3000.00 |
| 4 | ಜೆ.ಪಿ. ಉದ್ಯಾನವನದ ಅಭಿವೃದ್ಧಿ ಹಾಗೂ ನಿರ್ವಹಣೆ. | 50.00 |
| 5 | ಬಿ.ಬಿ.ಎಂ.ಪಿ. ನಿರ್ವಹಿಸುತ್ತಿರುವ ಉದ್ಯಾನವನಗಳಿಗೆ ಅಂತರಿಕವಾಗಿ ನರ್ಸರಿಗಳಿಗೆ ಉಪಕರಣಗಳನ್ನು ಖರೀದಿಸುವುದು. | 10.00 |
| 6 | ಜೆ.ಪಿ. ಉದ್ಯಾನವನದ 3ನೇ ಹಂತದ ಸೌಂದರೀಕರಣ. | 100.00 |
| 7 | ಪದ್ಮನಾಭನಗರದ ಭಾರತಿ ಹೌಸಿಂಗ್ ಸೊಸೈಟಿ ಉದ್ಯಾನವನದಲ್ಲಿ ಸಂಗೀತ ಕಾರಂಜಿಯನ್ನು ಅಳವಡಿಸುವುದು. | 500.00 |
| | ಒಟ್ಟು ಮೊತ್ತ ರೂ. | 3680.00 |

ಪಾಲಿಕೆಯ 198 ವಾರ್ಡ್‌ಗಳ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು, ವಾರ್ಡ್‌ಗಳಲ್ಲಿ ಬರುವ ಸಿ.ಎ.ನಿವೇಶನ, ಉದ್ಯಾನವನಗಳೆಂದು ಮೀಸಲಿಟ್ಟಿರುವ ಜಾಗಗಳಿಗೆ ಹಾಗೂ ಪಾಲಿಕೆಯ ಆಸ್ತಿಯನ್ನು ರಕ್ಷಿಸಿಕೊಂಡು ತಂತಿಬೇಲಿ ಮತ್ತು ಗ್ರಿಲ್ ಅಳವಡಿಸುವ ಕಾಮಗಾರಿಗಳಿಗೆ 2013-14ನೇ ಸಾಲಿನ ಆಯವ್ಯಯದಲ್ಲಿ ಯಾವುದೇ ಅನುದಾನವನ್ನು ಕಾಯ್ದಿರಿಸದೇ ಇರುವ ಕಾರಣ, ಮೇಲ್ಕಂಡ ಲೆಕ್ಕಶೀರ್ಷಿಕೆಯಡಿಯಲ್ಲಿ ಕಾಯ್ದಿರಿಸಿರುವ ಅನುದಾನದಲ್ಲಿ ಈ ಕೆಳಕಂಡಂತೆ ಹಂಚಿಕೆ ಮಾಡಿರುವ ಅನುದಾನಕ್ಕೆ ಕಾಮಗಾರಿಗಳ ಕಾರ್ಯಕ್ರಮ ಪಟ್ಟಿಯನ್ನು ತಯಾರಿಸಿಕೊಂಡು ಸಮಿತಿಯ ಅನುಮೋದನೆ ಪಡೆಯುವಂತೆ ನಿರ್ಣಯ ತೆಗೆದುಕೊಂಡಿರುತ್ತದೆ.

| ವಲಯಗಳು | ಮೊತ್ತ (ರೂ.ಲಕ್ಷಗಳಲ್ಲಿ) |
|---|---|
| ಪೂರ್ವ ವಲಯದಲ್ಲಿ ಬರುವ ಉದ್ಯಾನವನಗಳ ನಿರ್ವಹಣೆಗೆ | 250.00 |
| ಪಶ್ಚಿಮ ವಲಯದಲ್ಲಿ ಬರುವ ಉದ್ಯಾನವನಗಳ ನಿರ್ವಹಣೆಗೆ | 250.00 |
| ದಕ್ಷಿಣ – 1 ಮತ್ತು 2 ರ ವಲಯದಲ್ಲಿ ಬರುವ ಉದ್ಯಾನವನಗಳ ನಿರ್ವಹಣೆಗೆ | 250.00 |
| ಯಲಹಂಕ ವಲಯದಲ್ಲಿ ಬರುವ ಉದ್ಯಾನವನಗಳ ನಿರ್ವಹಣೆಗೆ | 150.00 |
| ಬೊಮ್ಮನಹಳ್ಳಿ ವಲಯದಲ್ಲಿ ಬರುವ ಉದ್ಯಾನವನಗಳ ನಿರ್ವಹಣೆಗೆ | 150.00 |
| ರಾಜರಾಜೇಶ್ವರಿನಗರ ವಲಯದಲ್ಲಿ ಬರುವ ಉದ್ಯಾನವನಗಳ ನಿರ್ವಹಣೆಗೆ | 150.00 |
| ದಾಸರಹಳ್ಳಿ ವಲಯದಲ್ಲಿ ಬರುವ ಉದ್ಯಾನವನಗಳ ನಿರ್ವಹಣೆಗೆ | 100.00 |
| ಮಹದೇವಪುರ ವಲಯದಲ್ಲಿ ಬರುವ ಉದ್ಯಾನವನಗಳ ನಿರ್ವಹಣೆಗೆ | 100.00 |
| ಒಟ್ಟು ಮೊತ್ತ ರೂ. | 1400.00 |

ಮೇಲಿನ ಎಂಟು ವಲಯಗಳ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲು 2013–14ನೇ ಸಾಲಿನ ಆಯವ್ಯಯದಲ್ಲಿ **ಪಿ–0088** ಲೆಕ್ಕಶೀರ್ಷಿಕೆಯಡಿಯಲ್ಲಿ ರೂ.**3000.00**ಲಕ್ಷಗಳನ್ನು ಕಾಯ್ದಿರಿಸಿರುವ ಅನುದಾನದಲ್ಲಿ **ರೂ.1400.00** ಲಕ್ಷಗಳನ್ನು ಮೇಲ್ಕಂಡ ವಲಯವಾರು ಉದ್ಯಾನವನಗಳಿಗೆ ಹಂಚಿಕೆ ಮಾಡಿದ್ದು ಮತ್ತು ಪಾಲಿಕೆಯ ಗೌರವಾನ್ವಿತ ಸದಸ್ಯರುಗಳ ವಾರ್ಡ್‌ಗಳಿಗೆ ಅನುದಾನ ಕೋರಿರುವ ಮನವಿ ಮೇರೆಗೆ **ರೂ.700.00**ಲಕ್ಷಗಳನ್ನು ಹಂಚಿಕೆ ಮಾಡಿ, ಉಳಿಕೆ **ರೂ.900.00**ಲಕ್ಷಗಳನ್ನು ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರುಗಳ ವಾರ್ಡ್‌ಗಳಿಗೆ ಈ ಕೆಳಕಂಡಂತೆ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು ಅನುದಾನವನ್ನು ಹಂಚಿಕೆ ಮಾಡಿ ಸಮಿತಿಯು ಈ ರೀತಿ ನಿರ್ಣಯ ಕೈಗೊಂಡಿರುತ್ತದೆ.

**ಗೌರವಾನ್ವಿತ ಸದಸ್ಯರುಗಳು ಕೋರಿರುವ ವಾರ್ಡ್‌ಗಳಿಗೆ ಹಂಚಿಕೆ ಮಾಡಿರುವ ಅನುದಾನದ ವಿವರ:–**

| **ವಾರ್ಡ್ ಸಂಖ್ಯೆ** | **ಮೊತ್ತ (ರೂ.ಲಕ್ಷಗಳಲ್ಲಿ)** |
|---|---|
| 127 | **25.00** |
| 179 | **50.00** |
| 09 | **25.00** |
| 168 | **20.00** |
| 159 | **10.00** |
| 112 | **30.00** |
| 19 | **35.00** |
| 89 | **25.00** |
| 80 | **30.00** |
| 03 | **25.00** |
| 75 | **20.00** |

| | |
|---|---|
| 99 | **20.00** |
| 100 | **40.00** |
| 15 | **10.00** |
| 72 | **25.00** |
| 14 | **45.00** |
| 110 | **25.00** |
| 50 | **90.00** |
| 11 | **10.00** |
| 57 | **20.00** |
| 42 | **25.00** |
| 115 | **45.00** |
| 32 | **25.00** |
| 20 | **25.00** |

ಮೇಲಿನ ಎಂಟು ವಲಯಗಳಲ್ಲಿ ಬರುವ ಉದ್ಯಾನವನಗಳ ನಿರ್ವಹಣೆಗೆ ಹಂಚಿಕೆ ಮಾಡಿರುವ ಅನುದಾನವನ್ನು ಜರೂರಾಗಿ ಅಲ್ಪಾವಧಿ ಟೆಂಡರ್ ಕರೆದು ಉದ್ಯಾನವನಗಳನ್ನು ಅಭಿವೃದ್ಧಿಪಡಿಸಿ ನಿರ್ವಹಣೆ ಮಾಡುವಂತೆ ಸಮಿತಿಯು ತೀರ್ಮಾನಿಸಿದೆ.

**ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರ ವಾರ್ಡ್‌ಗಳಿಗೆ ಹಂಚಿಕೆ ಮಾಡಿರುವ ಅನುದಾನದ ವಿವರ:–**

| **ವಾರ್ಡ್ ಸಂಖ್ಯೆ.** | **ಮೊತ್ತ (ರೂ.ಲಕ್ಷಗಳಲ್ಲಿ)** |
|---|---|
| 04 | 450.00 |
| 56 | 50.00 |
| 28 | 50.00 |
| 13 | 50.00 |
| 15 | 50.00 |
| 100 | 50.00 |
| 196 | 50.00 |
| 11 | 50.00 |
| 60 | 50.00 |
| 06 | 50.00 |

ಮೇಲ್ಕಂಡಂತೆ, ಹಂಚಿಕೆ ಮಾಡಿರುವ ಎಲ್ಲಾ ಅನುದಾನಕ್ಕೆ ಜಾಬ್‌ಕೋಡ್ ನೀಡಿ ಕಾಮಗಾರಿಯನ್ನು ಕೈಗೊಳ್ಳುವುದು ಹಾಗೂ ವಲಯಗಳಿಗೆ ಹಂಚಿಕೆ ಮಾಡಿರುವ ಅನುದಾನವನ್ನು ಹೊರತುಪಡಿಸಿ ಉಳಿದಂತೆ ಹಂಚಿಕೆ ಮಾಡಿರುವ ಅನುದಾನವನ್ನು ತುರ್ತಾಗಿ ಉದ್ಯಾನವನಗಳನ್ನು

ಅಭಿವೃದ್ಧಿಪಡಿಸಬೇಕಾಗಿರುವ ಕಾರಣ, ವಾರ್ಡ್‌ಗಳಿಗೆ ಕಾಯ್ದಿರಿಸಿರುವ ಅನುದಾನವನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿ ಕಾಮಗಾರಿಯನ್ನು ಕೈಗೊಳ್ಳುವಂತೆ ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿತು.

ಕೊನೆಯದಾಗಿ, ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ಮೇಲಿನ ವಿಷಯಗಳ ಬಗ್ಗೆ ಚರ್ಚಿಸಿರುವಂತೆ ಕ್ರಮ ವಹಿಸಲು, ಮಾನ್ಯ ಆಯುಕ್ತರು ಕಾರ್ಯಪ್ರವೃತ್ತರಾಗಬೇಕೆಂದು ಕೋರುತ್ತಾ, ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ